ಶ್ರೀರಸ್ತು.

ಯೋಗಾವಳೀ ಪ್ರಾರಂಭಃ.

ಶ್ಲೋ॥ ಉಮಾಸುತಂನಮಸ್ಕೃತ್ಯ ಅಂಬಿಕಾಂ
ಹಂಸವಾಹಿನೀಂ । ಯೋಗಾನಂದಗುರುಂವಂದೇ
ಪರಮಾನಂದರೂಪಿಣಂ॥

ಟೀ॥ ವಿಘ್ನೇಶ್ವರನನ್ನು ಹಂಸವಾಹಿನಿಯಾದ ಸರಸ್ವತೀ ದೇವಿಯನ್ನು ನಮಸ್ಕರಿಸಿ ಆನಂದರೂಪನಾದ ಯೋಗಾನಂದ ಗುರುಗಳಿಗೆ ವಂದಿಸುತ್ತೇನೆ ॥೧॥

ಉಮಾರಮಣಮೋಂಕಾರಂಸರ್ವೇಶಂಶಶಿಶೇಖರಂ ।
ನೀಲಕಂಠಂಮಹಾದೇವಂಶಂಕರಂಪ್ರಣಮಾಮ್ಯಹಂ ।

ಟೀ॥ ಪಾರ್ವತೀಪತಿಯಾದ ಓಂಕಾರಸ್ವರೂಪನಾದ ಸರ್ವೇಶನಾದ ಇಂದುಭೂಷಣನಾದ ಕಪ್ಪುಗೊರಳುಳ್ಳ ಸುಖವನ್ನು ಕೊಡುವ ಮಹಾದೇವನನ್ನು ಅಭಿವಂದಿಸುತ್ತೇನೆ ... ... ॥೨॥

ಭಾವಾಭಾವಾಧಿಪೋದೃಷ್ಟಿರುಚ್ಚನೀಚಬಲಾಬಲೈಃ ।
ಶತ್ರುಮಿತ್ರಸಮಂಕ್ಷೇತ್ರಂ ಸ್ವಪ್ರೇಕ್ಷಾಣ್ಯೈಶ್ಚಸ್ವಾಂ
ಶಕೈಃ । ಪಾಕಾಂಶಪಾಪಮಿಶ್ರೇಚಪಾಪವೃದ್ಧಿಸ್ತ
ಥೈವಚ । ವೃದ್ಧಾಸ್ತುಮಯುಬಾಲಾಶ್ಚವಕ್ರಾವಕ್ರಾ
ಶ್ಚಕಾರಕಾಃ । ಯೋಗಕಾರಕಯೋಗಾಶ್ಚ ವಕ್ರರ್
ದಲಕ್ಷೇ ಷ್ಟಿತಥೈವಚ. ಏವಂಜ್ಞಾತ್ವಾಫಲಂಸರ್ವಂಶುಭಾ
ಪಾಶುಭವಿನಿಶ್ಚಿತಂ ॥

ತ್ರಿಂಶದ್ಯೋಗಗಳ ಹೆಸರುಗಳು.

ಪುರುಷರಿಗೆ ೨೬. ಹೆಂಗಸರಿಗೆ ೪.

ಅದರ ಹೆಸರುಗಳು.

ದೀರ್ಘಮಾಯುರಲ್ಪಾಶ್ಚ ಭಾಗ್ಯೋದ್ವಾಹಶ್ಚ ವಾಹನಂ । ಸಂತಾನಧನವಿದ್ಯಾಶ್ಚ ಕ್ಷೇತ್ರ ಜ್ಞಾತಿರ್ನೃ ಭೂಪತಿಃ । ಸಾಮ್ರಾಜ್ಯಂಸಾರ್ವಭೌಮಂಚ ರಾಜಸಿಂಹಾಸನಸ್ತಥಾ । ಜಾರಜಾರಜವಾಣಿಜ್ಯ ಸತ್ಕರ್ಮಂಚೇತಿವಿಂಶತಿಃ ॥ ದುಷ್ಕರ್ಮಚಾಪಮೃತ್ಯುಶ್ಚ ಕೇಮುದ್ರುಶ್ಚ ತಥೈವಚ । ಯಜ್ಞಸನ್ಯಾಸಕೈವಲ್ಯಂ ಭವೇದ್ಯೋಗಾವಳಿಃಕ್ರಮಾತ್ । ಯೋಗಾಶ್ಚ ತ.ಥವೇಸ್ತ್ರೀಣಾಂ ಸೌಭಾಗ್ಯಂಪತಿಹೀನತಾ । ಸಾಹಚರ್ಯಂಸುತೋತ್ಪತ್ತಿ ತ್ರಿಂಶದ್ಯೋಗಾವಳಿಃಕ್ರಮಾತ್ ॥

ದೀರ್ಘಾಯುರ್ಯೋಗಃ.

ಶ್ಲೋ॥ ಲಗ್ನಾತ್ಪಂಚಮಸಪ್ತಮೇಚನವಮೇ ಸ್ವೋಚ್ಚಸ್ಥಿತೋವಾಕ್ಪತಿಃ । ಸ್ವದ್ರೇಕ್ಕಾಣನವಾಂಶಭಾಗಬಲಿಭಿಃ ಪರಮೋಚ್ಚಭಾಗೇಸತಿ । ಶುಕ್ರಸೌಮ್ಯವಿಲಗ್ನನಾಥಸಹಿತಃಕೇಂದ್ರತ್ರಿಕೋಣಾಶ್ರಿತೋ । ಜಾತಃಪೂರ್ಣಶತಾಯುಃ ಪುಣ್ಯಜನನಶ್ಚ ಕ್ಷ್ಮೇಶ್ವರೋ ಭೂಪತಿಃ॥

ಟೀ॥ ಲಗ್ನಕ್ಕೆ ಐದನೆಯ ಸ್ಥಾನದಲ್ಲಿದ್ದರೂ ಏಳನೆಯ ಸ್ಥಾನದಲ್ಲಿದ್ದರೂ ಒಂಭತ್ತನೆಯ ಸ್ಥಾನದಲ್ಲಿದ್ದರೂ ಪ್ರಸಿದ್ಧವಾದ ಒಂದಾನೊಂದು ಉತ್ತಮಸ್ಥಾನದಲ್ಲಿದ್ದ ಬೃಹಸ್ಪತಿನಾಮಕವಾದ ಗ್ರಹವು ಸ್ವದ್ರೇಕ್ಕಾಣದ

ಭತ್ತನೆಯ ಭಾಗಗಳಲ್ಲಿ ಅತಿ ಬಲಿಷ್ಠರಾದಂಥಾ ಗ್ರಹಂಗಳಸಮೇತನಾಗಿ, ಪರಮೋಚ್ಚಸ್ಥಾನದಲ್ಲಿ ಶುಕ್ರಗ್ರಹವು ಬುಧನಿಂದಲೂ ವಿಲಗ್ನನಾಥನಿಂದಲೂ ಸೇರಿ, ಕೇಂದ್ರತ್ರಿಕೋಣಾಶ್ರಿತನಾಗಿ ಇದ್ದವೇಳೆಯಲ್ಲಿ ಜನಿಸಿದ ಮನುಜನು ಸಂಪೂರ್ಣವಾದ ನೂರು ವರುಷಾಯುಃಪರಿಮಾಣ ಉಳ್ಳವನಾಗಿಯೂ, ಮತ್ತು ಮಂಡಲೇಶ್ವರನಾಗಿಯೂ, ಭೂಮಿಯಲ್ಲಿ ಅರಸಾಗಿಯೂ, ಪುಣ್ಯಶೀಲನಾಗಿಯೂ ಇರುವನೆಂದು ಕಾಲಜ್ಞಾನಿಗಳಾದ ಜ್ಯೋತಿಷ್ಕರಿಂದ ಈ ಮೇಲೆ ಉದಹರಿಸಲ್ಪಟ್ಟ ಸಂಗತಿಗಳೆಲ್ಲವು ವಿಶದವಾಡಲ್ಪಡುತಲಿಧೆ.

ಲಗ್ನಸ್ಥಿತೊಭೃಗುಸುತೊ ಗುರುಸಪ್ತಮೇಷು । ಲಗ್ನಾಧಿಪೈಃಬಲವತಶ್ಶುಭಸಂಯುತೇಷು । ಭಾಗ್ಯಸ್ಥಿತೊಯದಿಗುರುಶ್ಚವಿಲಗ್ನಕೇಂದ್ರೆ । ಲಗ್ನೇಶಲಗ್ನನಿಧನಾಧಿಪದೃಷ್ಟರಂಧ್ರೆ ! ರಿಪ್ಫಾಷ್ಟಮೇಷುನಭವೆದ್ಯದಿಪಾಪಚಂದ್ರೊ ದೀರ್ಘಾಯುರೆವಸುಖನೋದತಿಜಾತಕೇಷು ॥

ಟೀ॥ ಶುಕ್ರನು ಲಗ್ನದಲ್ಲಿದ್ದರೂ ಗುರು ಏಳನೆಯಮನೆಯಲ್ಲಿದ್ದರೂ, ಲಗ್ನಾಧಿಪರು ಬಲವಂತರಾಗಿ ಶುಭಗ್ರಹಗಳೊಡನೆ ಸೇರಿದ್ದರೂ ಗುರು ಒಂಭತ್ತನೆಯ ಮನೆಯಲ್ಲಿದ್ದಾಗ್ಯೂ ಲಗ್ನೇಶನಾದವನು ವಿಲಗ್ನಕೇಂದ್ರದಲ್ಲಿದ್ದರೂ ಲಗ್ನಾಧಿಪತಿಯಿಂದಲೂ ನಿಧನಾಧಿಪತಿಯಿಂದಲೂ ಅಷ್ಟಮಸ್ಥಾನವು ನಿರೀಕ್ಷಿಸಲ್ಪಟ್ಟಾಗ್ಯೂ ಅಥವಾ ಹನ್ನೆರಡನೆಯ ಸ್ಥಾನದಲ್ಲಿಯೂ, ಎಂಟನೆಯ ಸ್ಥಾ

ನದಲ್ಲಿಯೂ, ಪಾಪಿಷ್ಠನಾದಂಥ ಚಂದ್ರನಿಂದ ಶೂನ್ಯ
ವಾದ ಆ ಲಗ್ನದಲ್ಲಿ ಆ ಜಾತಕದೊಳ್ ಪುಟ್ಟಿದ ನರನು
ದೀರ್ಘಾಯುಸ್ಸುಳ್ಳವನಾಗಿ ಸುಖವನ್ನೈದುತ್ತಾನೆ॥೨

ಲಗ್ನಾಧಿಪಃ ಸುರಗುರುರ್ವ್ಯಯಸಪ್ತಮಸ್ಥೇ ರಂಧ್ರೇಶ
ರಂಧ್ರಮಥವಾಯದಿತುಂಗಸಂಸ್ಥೇ । ಲಾಭೇಶನಿಃ
ಬಲವತಃ ಶುಭಕೇಂದ್ರಸಂಸ್ಥೇ ದೀರ್ಘಾಯುರೇವಸು
ಖಮೋದತಿಜಾತಕೇಷು ... ॥೩॥

ಟೀ॥ ಲಗ್ನಾಧಿಪತಿಯಾದ ಗುರುವು ಏಳನೆಯ ಸ್ಥಾನ
ದಲ್ಲಿದ್ದರೆಯೂ ಎಂಟನೆಯ ಸ್ಥಾನಾಧಿಪತಿ ರಂಧ್ರಸ್ಥಾನ
ದಲ್ಲಿದ್ದರು ಹಾಗಲ್ಲದೆ ಉಚ್ಚಸ್ಥಾನದಲ್ಲಿದ್ದಾಗ್ಯೂ ಶನಿ
ಯು ಬಲವಂತನಾಗಿ ಹನ್ನೊಂದನೆಯ ಸ್ಥಾನದಲ್ಲಿದ್ದರೂ
ಶುಭಗ್ರಹಗಳು ಕೇಂದ್ರಸ್ಥಾನಗಳಲ್ಲಿದ್ದರೂ ಇಂಥಾ
ಜಾತಕದಲ್ಲಿ ಹುಟ್ಟಿದ ಮನುಷ್ಯರು ದೀರ್ಘಾಯುಸುಳ್ಳ
ವರಾಗಿ ಸುಖವಾಗಿ ಜೀವಿಸಿರುವರು ॥೩॥

ಪಾಪಾಷ್ಟಮೇಷುಭವನೆಯದಿಕೇಂದ್ರಕೋಣೆ
ಲಗ್ನಾಧಿಪಸುರಗುರುಸ್ಸಹಚಂದ್ರಪೂರ್ಣೆ । ತುಂ
ಗೇಷ್ವಲಗ್ನಮಥವಾಭೃಗುಪುತ್ರಬಾಣೆ ದೀರ್ಘಾ
ಯುರೇವಸುಖಮೋದತಿಜಾತಕೇಷು ॥೪॥

ಟೀ॥ ಪಾಪಗ್ರಹಗಳು ಅಷ್ಟಮಸ್ಥಾನಗಳಲ್ಲಿ ಕೇಂ
ದ್ರಸ್ಥಾನಗಳಲ್ಲಿಯು. (ಕೋಣಸ್ಥಾನವಂದರೆ) ಒಂಭ
ತ್ತನೆಯ ಸ್ಥಾನದಲ್ಲಾದರೂ, ಐದನೆಯ ಸ್ಥಾನದಲ್ಲಾ
ದರೂ ಲಗ್ನಾಧಿಪತಿಯಾದಂಥಾ ಗುರುವು ಸಂಪೂರ್ಣ
ಚಂದ್ರನಿಂದ ಕೂಡಿದ್ದಾಗ್ಯೂ ಅತಿ ಉಚ್ಚಸ್ಥಾನಗಳಲ್ಲಿ

ದ್ದಾಗ್ಯೂ ಶುಕ್ರನು ಐದನೆಯ ಸ್ಥಾನದಲ್ಲಿದ್ದಾಗ್ಯೂ ಇಂಥಾ ಜಾತಕಂಗಳಲ್ಲಿ ಹುಟ್ಟಿದವರು ದೀರ್ಘಾಯುಷ್ಮಂತರೇ ತಲೂ ಸುಖಜೀವಿಯೆಂತ ತಿಳಿಯತಕ್ಕದ್ದು॥

ಉಚ್ಚಸ್ಥಿತೋಸುರಗುರುರ್ಯದಿಲಗ್ನನಾಥೆ ರಂಧ್ರೇಶ
ರಂಧ್ರಮಥವಾಶುಭದೃಷ್ಟಿಯುಕ್ತೆ। ದುಷ್ಕರ್ಮ
ಶತೃಸದನೇರವಿಪಾಪಸಂಸ್ಥೆ ದೀರ್ಘಾಯುರೇವಸು
ಖವೋದತಿಜಾತಕೇಷು॥ ॥೫॥

ಟೀ॥ ಗುರುವು ಉಚ್ಚಸ್ಥಾನದಲ್ಲಿದ್ದರೂ ಲಗ್ನಾಧಿಪತಿ ಯೆಂಪಾಗಲಿ ಎಂಟನೆಯ ಸ್ಥಾನಾಧಿಪತಿಯು ಎಂಟನೆಯ ಸ್ಥಾನವು ಲಗ್ನಾಧಿಪತಿಯಿಂದಾಗಲಿ ಶುಭಗ್ರಹಗಳಿಂದಾಗಲಿ ನಿರೀಕ್ಷಿಸಲ್ಪಡುತಲಿದ್ದರೆ ಸೂರ್ಯನು ಶತೃಸ್ಥಾನದಲ್ಲಿ ಪಾಪಗ್ರಹಗಳ ಸಮೇತನಾಗಿದ್ದರೆ ಇಂಥಾ ಜಾತಕಂಗಳಲ್ಲಿ ಹುಟ್ಟಿದವರುಗಳು ಸುಖವಂತರಾಗಿಯೂ, ದೀರ್ಘಾಯುಷ್ಮಂತರಾಗಿಯೂ ಇರುತ್ತಾರೆಂದು ತಿಳಿಯತಕ್ಕದ್ದು ॥೫॥

ಯೋಗೆದೀರ್ಘಾಯುಗೆಜಾತೊ ದೃಢವಾನ್ಪುತ್ರ
ಪೌತ್ರಕಃ। ಭಾಗ್ಯಶೀಲಸ್ಸುಸಂಪನ್ನ ರಾಯು
ದೀರ್ಘೌನಸಂಶಯಃ ॥೬॥

ಟೀ॥ ಲೋಕದಲ್ಲಿ ಉತ್ತಮವಾದಂಥ ದೀರ್ಘಾಯು ರ್ಯೋಗದಲ್ಲಿ ಜನಿಸಿದವನು ದೃಢವಂತನಾಗಿಯೂ ಮಕ್ಕಳು ಮೊಮ್ಮಕ್ಕಳಿಂದ ಕೂಡಿ ಮಹಾ ಭಾಗ್ಯವಂತನಾಗಿಯೂ, ಒಳ್ಳೇಸ್ವಭಾವವುಳ್ಳಂಥಾವನಾಗಿಯೂ, ದೀರ್ಘಾ

ಯುಸ್ಸುಳ್ಳವನಾಗಿಯೂ ಇರುವನು. ಈ ವಿಷಯದಲ್ಲಿ ಸಂದೇಹವಿಲ್ಲ ॥೨॥

ಮಧ್ಯಾಯುರ್ಯೋಗಃ

ಶುಭಗ್ರಹತ್ರಿಕೋಣಸ್ಥಃಕೇಂದ್ರೇಪಾಪಸಮನ್ವಿ
ತಃ । ಲಗ್ನೇಶೋದುರ್ಬಲೋಯಸ್ಯ ಮಧ್ಯಾಯು
ರ್ಭವತಿಧ್ರುವಂ ॥೧॥

ಟೀ॥ ಶುಭಗ್ರಹಗಳು ತ್ರಿಕೋಣದಲ್ಲಿ ಇದ್ದುಕೊಂಡು, ಕೇಂದ್ರಸ್ಥಾನದಲ್ಲಿದ್ದು ಪಾಪಗ್ರಹಗಳಿಂದ ಶೇರಿದ್ದಾಗ್ಯೂ ಆ ಲಗ್ನಾಧಿಪನು ಯಾವನಿಗೆ ದುರ್ಬಲನಾಗಿರುತ್ತಾನೋ ಅಂಥವನಿಗೆ ಅರ್ಧಾಯುಸ್ಸು ಆಗುತ್ತೆ ಇದು ನಿಶ್ಚಯವು ॥೧॥

ಕೇಂದ್ರಸ್ಥಾನಶುಭಾಸ್ಸರ್ವೇ ಪಾಪೇಜನ್ಮಾಷ್ಟರಿ
ಪ್ಫಗೇ । ಲಗ್ನೇಶನೀಚರಾಶಿಸ್ಥೇ ಮಧ್ಯಾಯುರ್ಭವ
ತಿಧ್ರುವಂ ॥೨॥

ಟೀ॥ ಸಮಸ್ತವಾದ ಶುಭಗ್ರಹಗಳೆಲ್ಲವು ಕೇಂದ್ರಸ್ಥಾನಂಗಳಲ್ಲಿಲ್ಲದೆ ಪಾಪಗ್ರಹವು ಜನ್ಮಸ್ಥಾನದಲ್ಲಿಯೂ, ಎಂಟನೆಯ ಸ್ಥಾನದಲ್ಲಿಯೂ ಮತ್ತು ಹನ್ನೆರಡನೆಯ ಸ್ಥಾನದಲ್ಲಿಯೂ ಇದ್ದಾಗ್ಯೂ ಲಗ್ನಾಧಿಪತಿಯು ನೀಚರಾಶಿಯಲ್ಲಿಯೇ ಇದ್ದಪಕ್ಷೆ ಅದರೆ ಅಂಥವನಿಗೆ ಮಧ್ಯಾಯುಷ್ಯವೆಂದು ಭಾವವಾಗುತ್ತೆ. ನಿಶ್ಚಯವೆಂದರಿಯುವದು॥೨

ಲಾಭೇಭಾಗ್ಯೇಧನೇಮಂತ್ರೇ ಲಗ್ನೇಶೇಮೃತ್ಯುರಾಶಿಗೇ॥
ಪಾಪದೃಷ್ಟೇಸ್ಥಿತೇಲಗ್ನೇ ಮಧ್ಯಾಯುರ್ಭವತಿಧ್ರುವಂ॥

ಟೀ॥ ಗುರುವು ಹನ್ನೊಂದನೆಯಸ್ಥಾನದಲ್ಲಿದ್ದಾಗ್ಯೂ

ಒಂಭತ್ತನೆಯ ಸ್ಥಾನದಲ್ಲಿದ್ದಾಗ್ಯೂ, ಎರಡನೆಯಸ್ಥಾನ ದಲ್ಲಿದ್ದಾಗ್ಯೂ, ಲಗ್ನಕ್ಕೆ ಅಧಿಪತಿಯಾದವನು ಎಂಟನೆಯ ಸ್ಥಾನದಲ್ಲ ಇದ್ದಾಗ್ಯೂ ಲಗ್ನವು ಪಾಪದೃಷ್ಟಿಯಾಗಿ ಇದ್ದದ್ದೆ ಆದರೆ ಆ ಜಾತಕದಲ್ಲಿ ಹುಟ್ಟಿದ ಮನುಜನು ಮಧ್ಯಮಾಯುಸ್ಸನ್ನು ಪೊಂದುತ್ತಾನೆ ॥೩॥

ವ್ಯಯಸ್ಥಾನಗತೇಚಂದ್ರೇ ಲಗ್ನೇಶೇಶುಭಸಂಯುತೇ।
ಮೃತ್ಯುಸ್ಥಾನಗತೇಪಾಪೇಮಧ್ಯಾಯುರ್ಭವತಿಧ್ರುವಂ॥

ಟೀ॥ ಚಂದ್ರನು ಹನ್ನೆರಡನೆಯಸ್ಥಾನವನ್ನು ಹೊಂದಿದಾಗ್ಯೂ ಲಗ್ನಾಧಿಪತಿಯು ಶುಭಗ್ರಹಗಳಿಂದ ಶೇರಿದ್ದಾಗ್ಯೂ ಪಾಪಗ್ರಹನು ಅಷ್ಟಮಸ್ಥಾನದಲ್ಲಿದ್ದರೂ ಆ ಜಾತಕದಲ್ಲ ಜನ್ಮಿಸಿದವನು ಮಧ್ಯಾಯುಸ್ಸನ್ನು ಹೊಂದುತ್ತಾನೆ, ನಿಶ್ಚಯವು ॥೪॥

ಲಗ್ನೇ ಶನೀಚರಾಶಿಸ್ಥೇ ಲಗ್ನೇ ಗುರುಸಮನ್ವಿತೇ। ರವಿ
ರಾಹುಸ್ಥಿತೇರಂಧ್ರೇ ಮಧ್ಯಾಯುರ್ಭವತಿಧ್ರುವಂ॥೫॥

ಟೀ॥ ಲಗ್ನಾಧಿಪತಿಯು ನೀಚ ರಾಶಿಗತನಾಗಿದ್ದಾಗ್ಯೂ, ಲಗ್ನವು ಗುರುವಿನಿಂದ ಶೇರಿದ್ದಾಗ್ಯೂ ಎಂಟನೆಯಸ್ಥಾನದಲ್ಲಿ ಸೂರ್ಯನು ರಾಹುಗಳಿಬ್ಬರೂ ಏಕೆದಾಶೇರಿದ್ದಾಗ್ಯೂ ಆಕಾಲದಲ್ಲಿ ಹುಟ್ಟಿದವನು ಮಧ್ಯಾಯುಸ್ಸನ್ನು ಹೊಂದುತ್ತಾನೆ ॥೫॥

ಯೋಗೇಮಧ್ಯಾಯುಗೇಜಾತೋಮಧ್ಯಭಾಗ್ಯಸಮ
ನ್ವಿತಃ। ಶುಭಾಶುಭಫಲಪ್ರಾಪ್ತಿರ್ಜಾತಸ್ಯಚನ
ಸಂಶಯಃ ॥೬॥

ಟೀ॥ ಮಧ್ಯಯೋಗದಲಿಹುಟ್ಟಿದ ಮನುಷ್ಯನು ಅಲ್ಪ

ಭಾಗ್ಯದಿಂ ಸೇರಿದವನಾಗಿ ಶುಭ ಅಶುಭ ಫಲಗಳನ್ನು
ಹೊಂದುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ ||೬||

ಅಲ್ಪಾಯುರ್ಯೋಗಃ

ಶುಭಗ್ರಹಾನಕೇಂದ್ರಸ್ಥಾಃ ಲಗ್ನೇ ಪಾಪ ಸಮನ್ವಿ
ತಾಃ | ಲಗ್ನೇಶೋದುರ್ಬಲೋಯಸ್ಯ ಅಲ್ಪಾಯುರ್ಭ
ವೇತಿಧ್ರುವಂ ||೧||

ಟೀ|| ಕೇಂದ್ರಸ್ಥಾನದಲ್ಲಿ ಶುಭಗ್ರಹಗಳಿಂದ ಪ್ರಸಿ
ದ್ಧವಾದವುಗಳು ಇಲ್ಲದೇಹೋದರೆ, ಲಗ್ನದಲ್ಲಿಪಾಪಗ್ರಹ
ಗಳು ಸೇರಿಕೊಂಡಿದ್ದಾಗ್ಯೂ ಲಗ್ನೇಶನಾದಂಥವನು ಬ
ಲಹೀನನಾಗಿ ಯಾವಪುರುಷನಿಗೆ ಇರುತ್ತಾನೋ ಅಂಥ
ವನಿಗೆ ಅಲ್ಪಾಯುರ್ಯೋಗವಾಗಬಹುದು ಇದುನಿಶ್ಚಯಃ

ಲಗ್ನೇಶೇಕೇಂದ್ರಭಾವಸ್ಥೇ ಶುಭೈಸ್ಸರ್ವೈರ್ನವೀಕ್ಷತೇ|
ಚಂದ್ರರಾಹುರವಿರ್ಲಗ್ನೇ ಅಲ್ಪಾಯು ರ್ಭವತಿ
ಧ್ರುವಂ ||೨||

ಟೀ|| ಕೇಂದ್ರಭಾವದಲ್ಲಿ ಲಗ್ನಾಧಿಪನು ಇದ್ದು ಸಮ
ಸ್ತವಾದ ಶುಭಗ್ರಹಗಳಿಂದ ನೋಡಲ್ಪಡದೆ ಇದ್ದರೆ,
ಚಂದ್ರನು, ರಾಹುವು, ಸೂರ್ಯನು, ಈ ಮೂರು ಮಂದಿ
ಯು ಲಗ್ನದಲ್ಲಿದ್ದರೆ, ಅಂಥವನು ಸ್ವಲ್ಪಾಯುಷ್ಯನೆಂ
ದು ತಿಳಿಯತಕ್ಕದ್ದು ಇದುನಿಶ್ಚಯವು. ||೨||

ರಂಧ್ರೇಶೇಕುಜಸಂಯುಕ್ತೇ ಲಗ್ನೇಶೇನನಿರೀಕ್ಷಿತೇ ಚಂ
ದ್ರರಾಹುಸ್ಥಿತೇದೃಷ್ಟೇ ಅಲ್ಪಾಯುರ್ಭವತಿಧ್ರುವಂ||

ಟೀ|| ಎಂಟನೆಯ ಸ್ಥಾನಾಧಿಪತಿಯು ಅಂಗಾರಕನಿಂ
ದ ಸೇರಿದ್ದರೂ, ಲಗ್ನಾಧಿಪತಿಯಿಂದ ನಿರೀಕ್ಷಿಸಲ್ಪಡದೆ

ಚಂದ್ರನಿಂದಲು, ರಾಹುವಿನಿಂದಲೂ, ನೋಡಲ್ಪಟ್ಟರೂ, ಮೇಲೆ ಪ್ರದಹರಿಸಲ್ಪಟ್ಟ ಹಿಮಾಂಶು ರಾಹುವುಗಳು ಒಂದೇ ತಾವಿನಲ್ಲಿದ್ದರೂ, ಅಂಥವನು ಅಲ್ಪಾಯುವನ್ನೈದುವನು ॥೩॥

ಶನಿಮಂಗಳಚಂದ್ರಾರ್ಕರಂಧ್ರಕೇಂದ್ರತ್ರಿಕೋಣ
ಗಾಃ। ಶುಭಗ್ರಹೈರ್ನವೀಕ್ಷಂತೆ ಅಲ್ಪಾಯುರ್ಭವ
ತಿಧ್ರುವಂ ॥೪॥

ಟೀ॥ ಶನಿಯು, ಅಂಗಾರಕನು ಚಂದ್ರನು ಸೂರ್ಯನು ಈ ನಾಲ್ಕುಮಂದಿಯು ಅಷ್ಟಮಸ್ಥಾನದಲ್ಲಿ ಕೇಂದ್ರಸ್ಥಾನ, ತ್ರಿಕೋಣಸ್ಥಾನಗಳಲ್ಲಿದ್ದು ಶುಭಗ್ರಹಗಳಿಂದನಿರೀಕ್ಷಿಸಲ್ಪಡದಿದ್ದರೆ ಅಲ್ಪಜೀವಿಯೆಂತ ತಿಳಿಯತಕ್ಕದ್ದು, ನಿಶ್ಚಯವು ॥೪॥

ದ್ವಾದಶಾಷ್ಟಮಲಗ್ನೇಷು ಪಾಪಯುಕ್ತೋ ಭವೇ
ಚ್ಛಶಿ। ಕೇಂದ್ರಸ್ಥಾನಗತೇರಾಹೌ ಅಲ್ಪಾಯುರ್ಭವತಿ
ಧ್ರುವಂ ॥೫॥

ಟೀ॥ ಚಂದ್ರನು ಹನ್ನೆರಡನೆಯ ಸ್ಥಾನದಲ್ಲಿಯೂ ಎಂಟನೆಯ ಸ್ಥಾನದಲ್ಲಿಯೂ, ಲಗ್ನಸ್ಥಾನದಲ್ಲಿ ಪಾಪಗ್ರಹಗಳಿಂದ ಸೇರಿದವನಾಗಿದ್ದಾಗ್ಯೂ, ಕೇಂದ್ರಸ್ಥಾನದಲ್ಲಿ ರಾಹುವು ಇದ್ದು ಆರೀತಿಯಾದ ಜಾತಕದಲ್ಲಿ ಪುಟ್ಟಿದಮನುಜನು ಅಲ್ಪಾಯುರ್ಯೋಗವನ್ನು ಹೊಂದುತ್ತಾನೆ॥೫॥

ಭಾನುಶ್ಚ ಭಾನುಪುತ್ರಶ್ಚ ಭೂಮಿಪುತ್ರೋ ಭುಜಂ

ಗಮ॥ ಕ್ರಮಾಚ್ಚಂದ್ರಯುತೇರಂಧ್ರೇನಿಮಿಷಾ
ರ್ಧಂನಜೀವತೀ ॥೬॥

ಟೀ॥ ಸೂರ್ಯನು, ಶನೈಶ್ಚರನು, ಅಂಗಾರಕನು, ರಾಹುವು. ಈ ನಾಲ್ಕು ಮಂದಿಯು ಕ್ರಮವಾಗಿ ಶಶಾಂಕನಿಂದೊಡಗೂಡಿ ಎಂಟನೆಯ ಸ್ಥಾನದಲ್ಲಿದ್ದದ್ದೆ ಆದರೆ ಅಂಥ ಲಗ್ನದಲ್ಲಿ ಹುಟ್ಟಿದವನು ಒಂದು ನಿಮಿಷಾರ್ಧವಾಗ ರು ಬದುಕಲಾರನು ॥೬॥

ರವಿಶ್ಚಾರವಿಪುತ್ರಶ್ಚ ಭೂಮಿಪುತ್ರಶ್ಚ ಕೇಂದ್ರಗಃ ।
ದಶಾಹಂದಶಮಾಸಂತುದಶವರ್ಷಾಣಿಜೀವತಿ ॥೭॥

ಟೀ। ಸೂರ್ಯನು, ಶನೈಶ್ಚರನು, ಅಂಗಾರಕನು, ಕೇಂದ್ರಸ್ಥಾನದಲ್ಲಿದ್ದರೆ ಅಂಥಾ ಲಗ್ನದಲ್ಲಿ ಹುಟ್ಟಿದವರು ಹತ್ತುದಿನ, ಅಥವಾ ಹತ್ತು ತಿಂಗಳು, ಹತ್ತು ಸಂವತ್ಸರ ಪರ್ಯಂತವಾದರೂ ಇದ್ದು ಮೃತ್ಯು ಹೊಂದುವರು ॥೭॥

ಚಂದ್ರರಾಹುರವಿರ್ಲಗ್ನೇ ಅಷ್ಟಮೇಂಗಾರಕಃಶನಿಃ ।
ಸಪ್ತಾಹಂ ಸಪ್ತಮಾಸಂತುಸಪ್ತವರ್ಷಮಥಾಪಿ
ವಾ।ಶಿರುಷೋದಯುವೇಳಾಯಾಂ ಸದ್ಯೋಯಮಪು
ರಂವ್ರಜೇತ್ ॥೮॥

ಟೀ ॥ಚಂದ್ರನು, ರಾಹುವು, ಸೂರ್ಯನು, ಈ ಮೂರುಮಂದಿಯು ಲಗ್ನದಲ್ಲಿದ್ದರೆ ಎಂಟನೆಯ ಸ್ಥಾನದಲ್ಲಿ ಅಂಗಾರಕನು, ಶನಿಯು ಈರ್ವರು ಸಮ್ಮಿಳಿತವಾಗಿದ್ದರೆ ಅಂಥಾವೇಳೆಯಲ್ಲಿ ಹುಟ್ಟಿದವನು ಶಿರುಷೋದಯ ವೇಳೆಯಲ್ಲಿಯೆ ಮೃತಿಯಂ ತತ್ಕ್ಷಣದಲ್ಲಿ ಹೊಂದಿ ಯಮರಾಜಧಾನಿಯಂ ಪ್ರವೇಶಿಸುವನು ಅದಂ ತಪ್ಪಿಸಿಕೊಂಡರೆ

ಆಲಗ್ನದೋಳ್ ಜನ್ಮಿಸಿದವನು ಒಂದುವೇಳೆ ಇನ್ನು ಮು ಣಶೇಷವಿದ್ದರೆ, ಇದಂ ಅನುಭವಿಸುವದಕ್ಕೋಸ್ಕರ, ಏಳು ದಿವಸ, ಏಳು ತಿಂಗಳು, ಏಳು ವರುಷ ಪರ್ಯಂತರ ಜೀವಿಸುವನು ||೮||

ರಾಹುಚಂದ್ರಸ್ಥಿತೆಕೇಂದ್ರೆ ಸಪ್ತಮಂಗಾರಕಶನಿಃ
ಪಂಚಾಹಂಪಂಚಮಾಸಂತು ಪಂಚವರ್ಷಂನಜೀ
ವತಿ ||೯||

ಟೀ|| ರಾಹುವು, ಚಂದ್ರನು, ಕೇಂದ್ರಸ್ಥಾನದಲ್ಲಿದ್ದರೆ, ಅಂಗಾರಕನು ಶನಿಯು ಏಳನೆಯಸ್ಥಾನದಲ್ಲದ್ದರೆ ಅಂಥ ಜಾತಕದಲ್ಲಿ ಹುಟ್ಟಿದವನು ಐದು ದಿನ, ಐದು ತಿಂಗಳು ಐದುವರುಷವಾದರೂ ಬದುಕುವದಿಲ್ಲ ||೯||

ಶನಿಮಂಗಳ ಚಂದ್ರಾರ್ಕ ಲಗ್ನಕೇಂದ್ರತ್ರಿಕೋಣ
ಗಾಃ ! ರಂಧ್ರಸ್ಥಾನಗತೆರಾಹೌ ಸಯಾತಿಯಮ
ಮಂದಿರಂ ||೧೦||

ಟೀ|| ಶನಿಯು ಅಂಗಾರಕನು, ಚಂದ್ರನು, ಸೂರ್ಯನು, ಈ ನಾಲ್ವರು ಲಗ್ನದಲ್ಲಿದಾಗ್ಯೂ, ರಾಹುವು ಎಂಟನೆಯಸ್ಥಾನದಲ್ಲಿದ್ದರು ಮೇಲೆ ಉದಹರಿಸಲ್ಪಟ್ಟ ನಾಲ್ಕು ಮಂದಿ ಕೇಂದ್ರಸ್ಥಾನಗಳಲ್ಲಿಯೂ ಅಥವಾ ತ್ರಿಕೋಣಗಳಲ್ಲಿರುವಂಥಾ ಜಾತಕದಲ್ಲಿ ಹುಟ್ಟಿದವನು ಕೂಡ್ಲೆ ಯಮ ಪುರದ ದಾರಿಯನ್ನು ಏರುವನು ||೧೦||

ಮೃತ್ಯುಸ್ಥಾನಗತೆಜೀವೆಭೂಮಿಪುತ್ರೆಣವೀಕ್ಷಿತೆ|
ಚಂದ್ರರಾಹುಯುತೇಲಗ್ನೆ ಸಯಾತೊ ಯಮಮಂ
ದಿರಂ ||೧೧||

ಟೀ|| ಬೃಹಸ್ಪತಿಗ್ರಹವು ಎಂಟನೆಯಸ್ಥಾನದಲ್ಲಿ ಅಂ

ಗಾರಕನಿಂದ ನಿರೀಕ್ಷಿಸಲ್ಪಟ್ಟರೆ ಚಂದ್ರನು ರಾಹುವು ಲಗ್ನದಲ್ಲಿದ್ದರೆ ಅಂಥಾ ಲಗ್ನದಲ್ಲಿ ಹುಟ್ಟಿದವನು ಯಮನ ಗರಿಯಂ ಪ್ರವೇಶಿಸುವನು ॥೧೧॥

ಕ್ರೂರೇಣ ಸಂಯುತೆ ಚಂದ್ರೆ ಅಷ್ಟಮಂಗಾರಕ
ಶನಿಃ । ರವಿರಾಹುಸ್ಥಿತೆಲಗ್ನೆ ಸೆಯಾತಿಯಮಮಂ
ದಿರಂ ॥೧೨॥

ಟೀ॥ ಚಂದ್ರನು ಕ್ರೂರಗ್ರಹದಿಂದ ಕೇರಿದಾಗ್ಯೂ ಎಂಟನೆಯಸ್ಥಾನದಲ್ಲಿ ಅಂಗಾರಕ ಶನಿ ಇವರಿಬ್ಬರಿದ್ದರೂ ಸೂರ್ಯನು ರಾಹುಲಗ್ನಗಲ್ಲಿದ್ದರೂ, ಅಂಥಾಜಾತಕದಲ್ಲಿ ಹುಟ್ಟಿದವನು ಯಮಪಟ್ಟಣವಂ ಕುರಿತುಪೋಗುವನು ॥೧೨॥

ಕುಜರಾಹುಸ್ಥಿತೆಲಗ್ನೆ ಚಂದ್ರೆ ಜಾಮಿತ್ರಗೆಸತಿ ।
ಪಾಪಗ್ರಹಯುತೆ ದೃಷ್ಟೆ ಶೀಘ್ರಂಗಚ್ಛೆದ್ಯಮಾ
ಲಯಂ ॥೧೩॥

ಟೀ॥ ಅಂಗಾರಕನು, ರಾಹು ಲಗ್ನದಲ್ಲಿದ್ದರೂ ಚಂದ್ರನು ಏಳನೆಯ ಸ್ಥಳದಲ್ಲಿದ್ದ ಪಾಪಗ್ರಹಗಳಿಂದ ಕೇರಿನಿರೀಕ್ಷಿಸಲ್ಪಟ್ಟಾಗ್ಯೂ ಆ ಲಗ್ನದಲ್ಲಿ ಹುಟ್ಟಿದವನು ಜಾಗ್ರತೆಯಾಗಿ ಸಾಯುವನು ॥೧೩॥

ಬುಧಚಂದ್ರಸ್ಥಿತೆರಂಧ್ರೆಗುರೌರಾಹೌಚರಿಪ್ಫಗೆ।
ಕ್ಷೀಣಚಂದ್ರಯುತೆ ಲಗ್ನೆ ಶೀಘ್ರಂಗಚ್ಛೆದ್ಯಮಾ
ಲಯಂ ॥೧೪॥

ಟೀ॥ ಬುಧ ಚಂದ್ರರು ಎಂಟನೆಯಸ್ಥಾನದಲ್ಲಿದ್ದರೂ ಗುರು ರಾಹುಗಳು ಹನ್ನೆರಡನೆಯ ಸ್ಥಾನದಲ್ಲಿದ್ದರೂ

ಕ್ಷೀಣಚಂದ್ರನಿಂದ ಸಂಮಿಳಿತವಾಗಿದ್ದಾಗ್ಯೂ ಆ ಲಗ್ನ ದೊಳ್ಪುಟ್ಟಿದ ಪುರುಷನು ಬೇಗನೇ ಯಮಪುರಿಯನ್ನೈದುವನು ... ||೧೩||

ಲಗ್ನೇಶೇ ರಾಹುಸಂಯುಕ್ತೇ ಲಗ್ನೇ ಪಾಪಸಮನ್ವಿತೇ।
ಗುರುಸೌಮ್ಯಯುತೇರಂಧ್ರೇ ಶೀಘ್ರಂಗಚ್ಛೇದ್ಯಮಾಲಯಂ ... ||೧೪||

ಲಗ್ನಾಧಿಪತಿ ರಾಹುವಿನಿಂದ ಶೇರಿದ್ದಾಗ್ಯೂ ಪಾಪ ಗ್ರಹಗಳಿಂದ ಲಗ್ನವು ಕೂಡಿದ್ದಾಗ್ಯೂ ಬುಧನು ಬೃಹಸ್ಪತಿಯು ಎಂಟನೆಯ ಸ್ಥಾನದಲ್ಲಿದ್ದಾಗ್ಯೂ ಅಂಥಾಲಗ್ನದೊಳು ಜನಿಸಿದ ಜೀವನು ಯಮಪಟ್ಟಣಕ್ಕೆ ಪೋಗುವನು ... ||೧೫||

ಯೋಗೇಅಲ್ಪಾಯುಗೇಜಾತೋ ಅಲ್ಪಭಾಗ್ಯಸಮನ್ವಿತಃ।ದೀರ್ಘಾಯುರ್ನಭವೇತ್ಸತ್ಯಂಅಲ್ಪಯೋಗೋನಸಂಶಯಃ ... ||೧೬||

ಟೀ॥ ಏತಾದೃಶವಾದಅಲ್ಪಾಯುರ್ಯೋಗದಲ್ಲಿ ಹುಟ್ಟಿದವನು ಅಲ್ಪಭಾಗ್ಯನೆಂಬ ಒಂದಾನೊಂದು ಪ್ರಖ್ಯಾತಿಯಂ ಹೊತ್ತುಕೊಂಡು ಭೂಮಿಯುಮೇಲೆ ಬಹಳದಿನ ಸ ಬದುಕಲಾರದ ಸಾಯುವನು ಸಂಶಯವಿಲ್ಲ ||೧೬||

---*---

ಭಾಗ್ಯಾಯುರ್ಯೋಗಃ.

ಭಾಗ್ಯೇಶೇಭಾಗ್ಯರಾಶಿಸ್ಥೇ ಗುರುಣಾಯದಿವೀಕ್ಷಿತೇ।
ಭೃಗುಪುತ್ರಯುತೇಭಾಗ್ಯೇ ಯೋಗಶ್ರೀಮಂತಸಂಜ್ಞಕಃ ||೧||

ಟೀ॥ ಮುಂದೆ ಯಲ್ಲಕ್ಕೂ ಉತ್ತಮವಾದ ಭಾಗ್ಯಯೋಗವನ್ನು ಸೂಚಿಸುತ್ತಾನೆ.- ಒಂಭತ್ತನೆಯ ಸ್ಥಾನದಲ್ಲಿ ಭಾಗ್ಯಾಧಿಪತಿಯು ಇದ್ದಾಗ್ಯೂ ಗುರುವಿನಿಂದ ನೋಡಲ್ಪಟ್ಟಂಥವನಾದಾಗ್ಯೂ . ಒಂಭತ್ತನೆ ಸ್ಥಾನವು ಶುಕ್ರನಿಂದ ಕೇರಿದ್ದರೂ ಆ ಲಗ್ನದಲ್ಲಿ ಹುಟ್ಟಿದವನು ಭಾಗ್ಯವಂತನೆಂಬ ನಾಮಧೇಯವಂ ಪಡೆದಿರುವನು ... ... ||೧||

ಭಾಗ್ಯೇಶೆಭಾಗ್ಯರಾಶಿಸ್ಥೆ ಬುಧಶುಕ್ರಸಮನ್ವಿತೆ ।
ಗುರು ಚಂದ್ರಯುತೆ ಲಗ್ನೆ ಯೋಗಶ್ರೀಮಂತಸಂಜ್ಞಕಃ ... ||೨||

ಟೀ॥ ಒಂಭತ್ತನೆಯ ಸ್ಥಾನಾಧಿಪತಿ ಒಂಭತ್ತನೆಸ್ಥಾನದಲ್ಲಿ ಇದ್ದಾಗ್ಯೂ ಬುಧನಿಂದ ಶುಕ್ರನಿಂದ ಮಿಳಿತವಾದಾಗ್ಯೂ ಲಗ್ನವು ಗುರುವಿನಿಂದ ಚಂದ್ರನಿಂದ ಕೂಡಿದ್ದಾಗ್ಯೂ ಇಂಥ ಲಗ್ನದಲ್ಲಿ ಹುಟ್ಟಿದವನೆ ಶ್ರೀಮಂತನಾಗಿ ಇರುವನು ... ... ||೨||

ಲಗ್ನೇಶಭಾಗ್ಯರಾಶಿಸ್ಥೆಭಾಗ್ಯೇಶಭೃಗುಸಂಯುತೆ।
ಸ್ವೋಚ್ಚಲಾಭಗತೆಚಂದ್ರೆಯೋಗಶ್ರೀಮಂತಸಂಜ್ಞಕಃ ... ||೩||

ಟೀ॥ ಲಗ್ನಕ್ಕೆ ಅಧಿಪತಿಯೂ ಒಂಭತ್ತನೆಯ ಸ್ಥಾನದಲ್ಲಿದ್ದರೂ ಒಂಭತ್ತನೆಯ ಸ್ಥಾನಾಧಿಪತಿ ಶುಕ್ರನಿಂದ ಕೇರಿದ್ದರೂ ಚಂದ್ರನು ವೃಷಭ ರಾಶಿಯಲ್ಲಿದ್ದರೂ ಅಥವಾ ಹನ್ನೊಂದನೆಯಸ್ಥಾನದಲ್ಲಿದ್ದರೂ ಇಂಥಾಲಗ್ನದಲ್ಲಿ ಹುಟ್ಟಿದವನು ಶ್ರೀಮಂತನಾಗಿರುವನು ... ||೩||

ಭಾಗ್ಯೇಶವಿತ್ತಭಾವಸ್ಥೇ ಧನೇಶೇಚಂದ್ರಸಂಯುತೇ ।
ಬುಧಭಾರ್ಗವಗೇಲಗ್ನೇ ಭೋಗ ಶ್ರೀಮಂತಸಂ
ಜ್ಞಿಕಃ ... ... ।೩॥

ಟೀ॥ ಒಂಭತ್ತನೇಯ ಸ್ಥಾನಾಧಿಪತಿಯೂ ದ್ವಿತೀಯ ಸ್ಥಾನದಲ್ಲಿದ್ದಾಗ್ಯೂ ಎರಡನೇಯ ಸ್ಥಾನಾಧಿಪತಿ ಚಂದ್ರನ ಸಹಿತನಾಗಿದ್ದಾಗ್ಯೂ ಬುಧ ಶುಕ್ರರು ಲಗ್ನದಲ್ಲಿದ್ದಾಗ್ಯೂ ಅಂಥಾ ಲಗ್ನದಲ್ಲಿ ಜನಿಸಿದವನು ಶ್ರೀಮಂತನಾಗುವನು ... ... ॥೪॥

ಪಂಚಮೇಭೃಗುಸಂಯುಕ್ತೇ ವಿತ್ತೇ ಚಂದ್ರಸಮನ್ವಿತೇ।
ಗುರೌಭಾಗ್ಯಸ್ಥಿತೇಲಗ್ನೇ ಯೋಗಶ್ರೀಮಂತ ಸಂ
ಜ್ಞಿಕಃ ... ... ॥೫॥

ಟೀ॥ ಪಂಚಮಸ್ಥಾನವು ಶುಕ್ರನಿಂದ ಶೇರಿದ್ದರೂ ಎರಡನೇಯ ಸ್ಥಾನವು ಚಂದ್ರನಿಂದ ಕೂಡಿದ್ದರೂ ಗುರುವು ಒಂಭತ್ತನೇಯ ಸ್ಥಾನದಲ್ಲಿ ಬಂದ ನಿಂತಿದ್ದರೂ ಅಂಥಾ ಲಗ್ನದಲ್ಲಿ ಜನಿಸಿದವನು ಭಾಗ್ಯವಂತನಾಗಿಯೇ ಇರುವನು ... ... ॥೫॥

ಭಾಗ್ಯಯೋಗೇತುವಿಖ್ಯಾತಃ ಬಹುಭಾಗ್ಯಸಮ
ನ್ವಿತಃ । ನಿತ್ಯಾನಂದನಮೋದಂತೇಭಾಗ್ಯಯೋ
ಗೋನಸಂಶಯಃ ॥೬॥

ಟೀ॥ ಈ ಮೇಲೆ ಉದಹರಿಸಲ್ಪಟ್ಟ ಮುಖ್ಯಾಂಶಗಳಿಂದೊಡಗೂಡಿದ ಭಾಗ್ಯಯೋಗಗಳಿಂದ ಶೇರಿದಪ್ರಖ್ಯಾತಿಪಟ್ಟ ಲಗ್ನಗಳಲ್ಲಿ ಹುಟ್ಟಿದವನು ಮಹಾ ಭಾಗ್ಯಸಂಪನ್ನನಾಗಿ ನಿತ್ಯಾನಂದದಿಂದ ಸಂತೋಷಚಿತ್ತವಿತ್ತ ಯು

ಕ್ತನಾಗಿ ತಾನುನ್ನು ಭಾಗ್ಯವನ್ನು ಅನುಭವಿಸುವದೊಂ ದಲ್ಲದೆ, ಆಲಗ್ನ ಗಳ ಬಲೀಯ್ಯದಿಂದ ಮಾತಾಪಿತ್ರಾದಿ ಸ ರ್ವಕುಟುಂಬಕ್ಕೂ ಧನ ಧಾನ್ಯ ಕನಕ ಮಣಿ ಹಾರಾದಿ ಐಶ್ವರ್ಯಾವಿರ್ಭಾವದಿಂ ಸುಖಪಡಿಸುತ್ತಾ ಒಳ್ಳೇಲಗ್ನದ ಲ್ಲಿ ಹ ಟ್ಟಿದ ಮನುಜನು ಚಿರಜೀವಿಯಾಗಿ ಬದುಕುವನೆಂ ದು ಈ ಮಹಾಭಾಗ್ಯಾದಿಯೋಗವಿಧಾನವು ಹೇಳಲ್ಪ ಟ್ಟಿತು. ಈ ವಿಷಯದಲ್ಲಿ ಏನು ಸಂಶಯ ವಿರಲಾರದು॥

-----*-----

ವಿವಾಹಯೋಗಃ.

ಲಗ್ನೇಶೇ ಲಗ್ನ ಭಾವಸ್ಥೇ ಜಾಮಿತ್ರೇ ಶುಭವೀಕ್ಷಿತೇ। ಭಾ ಗ್ಯಶೀ ಲಾಭವೇದ್ಯಾರ್ಯಾ ಯೋಗೋ ವೈವಾಹಸಂ ಜ್ಞಕಃ. ॥೧॥

ಟೀ॥ ಲಗ್ನಾಧಿಪತಿ ಲಗ್ನದಲ್ಲಿದ್ದರೂ ಏಳನೆಯಸ್ಥಾ ನವು ಶುಭಗ್ರಹದಿಂದ ನಿರೀಕ್ಷಿಸಲ್ಪಟ್ಟರೂ, ಈ ವಿವಾಹ ಯೋಗದಲ್ಲಿ ಹುಟ್ಟಿದಂಥವನು ಮಹಾಭಾಗ್ಯವಂತಳಾ ಯಾದ ಭಾರ್ಯೆಯಿಂದೊಡಗೂಡಿರುತ್ತಾನೆ ॥೧॥

ಲಗ್ನೇಶೇದಾರಭಾವಸ್ಥೇ ಗುರುಣಾಯುದಿವೀಕ್ಷಿತೇ। ಕರ್ಮ ಶೀಲಾಭವೇದ್ಭಾರ್ಯಾಯೋಗೋವೈವಾಹಸಂಜ್ಞಕಃ॥

ಟೀ॥ ಲಗ್ನಾಧಿಪತಿಯು ಏಳನೇಸ್ಥಾನದಲ್ಲಿದ್ದು ಗುರು ವಿನಿಂದ ನೋಡಲ್ಪಟ್ಟರೆ ಧರ್ಮಸಾಧನಾರ್ಯ್ಯ, ಅಂಥಾವಿವಾ ಹಯೋಗದಲ್ಲಿ ಜನಿಸಿದವನು ಸತ್ಕರ್ಮವನ್ನು ಆಚರಿಸು ವಂಥ ಸತಿಯನ್ನು ವಿವಾಹ ಮಾಡಿಕೊಂಡು ಸುಖವಾ ಗಿರುವನು ॥೨॥

ದಾರೇಶೇಲಗ್ನಸಂಯುಕ್ತೇ ಗುರುಚಂದ್ರೇಣವೀಕ್ಷಿತೇ।
ರೂಪಶೀಲಾಭವೇದ್ಭಾರ್ಯಾಯೋಗೋವೈವಾಹಸಂ
ಜ್ಞಿಕಃ ॥೩॥

ಟೀ ॥ ಏಳನೆಯ ಸ್ಥಾನಾಧಿಪತಿಯು ಲಗ್ನದಲ್ಲಿದ್ದು ಗುರುವಿನಿಂದಲೂ, ಚಂದ್ರನಿಂದಲೂ, ನೋಡಲ್ಪಟ್ಟರೆ ಆ ವಿವಾಹ ಯೋಗದಲ್ಲಿ ಹುಟ್ಟಿದಂಥವನು ಸುಂದರವಾದ ಕನ್ಯಕೆಯಂ ವಿವಾಹ ಮಾಡಿಕೊಳ್ಳುವನು ॥೩॥

ದಾರೇಶೇಭೃಗುಸಂಯುಕ್ತೇ ಪೂರ್ಣಚಂದ್ರೇಣ ವೀ
ಕ್ಷಿತೇ । ಪುಣ್ಯಶೀಲಾಭವೇದ್ಭಾರ್ಯಾಯೋಗೋವೈ
ವಾಹಸಂಜ್ಞಿಕಃ ॥೪॥

ಟೀ ॥ ಏಳನೆಯಸ್ಥಾನಾಧಿಪತಿ ಶುಕ್ರನಿಂದಶೇರಿ ಪೂರ್ಣಚಂದ್ರನಿಂದ ನಿರೀಕ್ಷಿಸಲ್ಪಟ್ಟವರಾದರೆ, ಅಂಥಾವಿವಾಹ ಯೋಗದಲ್ಲಿ ಹುಟ್ಟಿದಂಥವನು ಪುಣ್ಯಸ್ವಭಾವವುಳ್ಳ ಹೆಂಗುಸನ್ನು ಮದುವೆ ಮಾಡಿಕೊಳ್ಳುವನು ॥೪॥

ದಾರೇಶೇಕೇಂದ್ರಕೋಣಸ್ಥೇ ಶುಭಗ್ರಹನಿರೀಕ್ಷಿತೇ।
ಗುಣಶೀಲಾಭವೇದ್ಭಾರ್ಯಾಯೋಗೋವೈವಾಹಸಂ
ಜ್ಞಿಕಃ ... ॥೫॥

ಟೀ॥ ಏಳನೆಯ ಸ್ಥಾನಾಧಿಪತಿ ಕೇಂದ್ರದಲ್ಲಾಗಲಿ, ಅಥವಾ ಕೋಣದಲ್ಲಾದರೂ ಇದ್ದು, ಶುಭಗ್ರಹಗಳಿಂದ ನೋಡಲ್ಪಟ್ಟವನಾದರೆ ಅಂಥ ವಿವಾಹಯೋಗದಲ್ಲಿ ಹುಟ್ಟಿದಂಥವನು ಸದ್ಗುಣವಂತೆಯಾದ ಜಾಯಾ ಸಮೇತನಾಗಿಹನು ... ॥೫॥

ಯೋಗೇವೈವಾಹಕೇಜಾತೋ ಶೀಘ್ರೋದ್ವಾಹಸಮ

ನ್ವಿತಃ। ಸರ್ವಲಕ್ಷಣಸಂಪನ್ನಃ ಭಾರ್ಯಾಯುಕ್ತೋ
ನಸಂಶಯಃ ॥೭॥

ಟೀ॥ ಈ ವಿವಾಹ ಯೋಗದಲ್ಲಿ ಹುಟ್ಟಿದಂಥವನು ಶೀಘ್ರವಾಗಿ ಮದುವೆಯಂಮಾಡಿಕೊಂಡು ಸಮಸ್ತ ಲಕ್ಷಣ ಸಹಿತವಾಗಿ ಭಾರ್ಯಾಯುಕ್ತನಾಗಿ ಸುಖಪಡುತಿರುವನು ಸಂದೇಹವಿಲ್ಲ. ॥೭॥

-----❖-----

ವಾಹನಯೋಗಃ

ಚತುರ್ಥಾಧಿಪಉಚ್ಚಸ್ಥೇಗುರುಸೌಮ್ಯಸಮನ್ವಿತೇ
ವಾಹನಾದ್ವಾಹನೇಚಂದ್ರೇಲಗ್ನೇಶೇಸೌಮ್ಯರಾಶಿಗೇ।
ಗುರುಣಾಸಂಯುತೇದೃಷ್ಟೇ ಯೋಗೋವಾಹನ
ಸಂಜ್ಞಕಃ ॥೧॥

ಟೀ॥ ನಾಲ್ಕನೆಯ ಸ್ಥಾನಾಧಿಪತಿ ಉಚ್ಚಸ್ಥಾನದಲ್ಲಿದ್ದರೂ, ಬುಧ ಗುರುಗಳಿಂದ ಶೇರಿದ್ದಾಗ್ಯೂ, ಚಂದ್ರೇಶನು ಲಗ್ನೇಶನಾಗಿ ಸೌಮ್ಯ ರಾಶಿಯಲ್ಲಿ ಗುರುವಿನಿಂದ ಶೇರಿದವನಾದಾಗ್ಯೂ ನೋಡಲ್ಪಟ್ಟಂಥವನಾದಾಗ್ಯೂ ಇಂಥಾ ವಾಹನ ಯೋಗದಲ್ಲಿ ಹುಟ್ಟಿದಂಥವನು ವಾಹನದಿಂದ ವಾಹನವನ್ನು ಹೊಂದುವನು ॥೧॥

ಚತುರ್ಥೇಚಗತೇಚಂದ್ರೇತದೀಶೇಗುರುಸಂಯುತೇ। ವಿ
ತ್ತಶುಕ್ರೇಣಸಂದಿಷ್ಟೇಯೋಗೋವಾಹನಸಂಜ್ಞಕಃ॥

ಟೀ। ಚಂದ್ರನು ನಾಲ್ಕನೇಸ್ಥಾನದಲ್ಲಿದ್ದಾಗ ಆನಾಲ್ಕನೇ ಸ್ಥಾನಾಧಿಪತಿ ಗುರುವಿನಿಂದ ಶೇರಿದ್ದಾಗ್ಯೂ ಶುಕ್ರನಿಂದ ಎರಡನೇ ಸ್ಥಾನವು ನೋಡಲ್ಪಟ್ಟಾಗ್ಯೂ ಅಂಥ

ವಾಹನ ಯೋಗದಲ್ಲಿ ಹುಟ್ಟಿದವನು ವಾಹನವನ್ನು ಹೊಂದುವನು ||೨||

ವಾಹನೇಂವಾಹನಾಧೀಶೇಲಗ್ನೇ ಶೇಲಗ್ನ ವೀಕ್ಷಿತೇ|ಪಾತಾ
ಳೇಭೃಗುಸಂಯುಕ್ತೇಯೋಗೋವಾಹನಸಂಜ್ಞಿಕಃ||

ಟೀ|| ವಾಹನಾಧಿಪತಿಯು ಲಗ್ನೇಶನು ಲಗ್ನವನ್ನು ನೋಡುತ್ತಾ ಇದ್ದರೆ ಪಾತಾಳಸ್ಥಾನವು ಶುಕ್ರನಿಂದ ಶೇರಿದ್ದರೆ ಅಂಥಾವಾಹನ ಯೋಗದಲ್ಲಿ ಹುಟ್ಟಿದವನು ವಾಹನವನ್ನು ಹೊಂದುತ್ತಾನೆ ||೩||

ಗುರುಶುಕ್ರಬುಧೆ ಚಂದ್ರೆಪಾತಾಳೇಷುಸಮನ್ವಿತೇ|
ಲಗ್ನೇಶೆಭಾಗ್ಯರಾಶಿಸ್ಥೇ ಯೋಗೋವಾಹನಸಂಜ್ಞಿಕಃ||

ಟೀ|| ಗುರುವು, ಶುಕ್ರನು, ಬುಧನು, ಚಂದ್ರನು, (ಪಾತಾಳ) ಅಂದರೆ ನಾಲ್ಕನೆಸ್ಥಾನದಲ್ಲಿ ಶೇರಿದ್ದರೆ ಲಗ್ನಾಧಿಪತಿಯು ನವಮಸ್ಥಾನದಲ್ಲಿದ್ದರೆ, ಅಂಥಾ ವಾಹನ ಯೋಗದಲ್ಲಿಹುಟ್ಟಿದವನುವಾಹನವನ್ನುಹೊಂದುತ್ತಾನೆ.

ಯೋಗಸ್ಮಿನ್ವಾಹನೇಜಾತಸ್ಸತ್ವವಾಹನಸಂಯುತಃ|
ರಥಾಶ್ವಗಜಯಾನಾನಿನಿತ್ಯಾರೂಢೋಭವೆನ್ನರಃ||

ಟೀ|| ವಾಹನಯೋಗದಲ್ಲಿ ಹುಟ್ಟಿದಂತಾವನು ವಾಹನಗಳಿಂದಶೇರಿ ರಥ, ಕುದುರೆ,ಆನೆ,ಪಲ್ಲಕ್ಕಿ ಇವೇ ಮೊದಲಾದವುಗಳಲ್ಲಿ ನಿತ್ಯವು ಆರೂಢನಾಗಿ ಸಂಚರಿಸುವನು.

ಸಂತಾನಯೋಗಃ

ಪುತ್ರಸ್ಥಾನೆಗತೇಜೀವೆಲಗ್ನೇಶೆಸುತರಾಶಿಗೆ|ಧರ್ಮಶೇ
ಶೋಭವೇತ್ಪುತ್ರೋಯೋಗಸ್ಸಂತಾನಸಂಜ್ಞಿಕಃ||

ಟೀ|| ಬೃಹಸ್ಪತಿಯು, ಲಗ್ನಾಧಿಪತಿಯು ಐದನೆಯ

ಸ್ಥಾನದಲ್ಲಿದ್ದರೆ ಅಂಥಾ ಸಂತಾನ ಯೋಗದಲ್ಲಿ ಜನಿಸಿದ
ವನು ಧರ್ಮಗುಣ ಉಳ್ಳ ಪುತ್ರನನ್ನು ಹೊಂದುವನು ||೧||

ಸುತಕೇಕೇಂದ್ರಕೋಣಸ್ಥೆ ಗುರುಣಾಯದಿ ವೀಕ್ಷಿತೆ।
ಸುತೋವೈಧರ್ಮಸಂಪ್ರಾಪ್ತ ಯೋಗಸ್ಸಂತಾನಸಂ
ಜ್ಞಕಃ ||೨||

ಟೀ|| ಬೃಹಸ್ಪತಿಯು ಕೇಂದ್ರಕೋಣ ಸ್ಥಾನಗಳಲ್ಲಿ
ದ್ದರೆ ಗುರುವಿನಿಂದ ನೋಡಲ್ಪಟ್ಟವನಾದರೆ, ಸಂತಾನ
ಯೋಗದಲ್ಲಿ ಹುಟ್ಟಿದವನು ಧರ್ಮಿಷ್ಠನಾದ ಪುತ್ರನನ್ನು
ಪಡೆಯುವನು ||೨||

ಸುತೇಶೆಸುತರಾಶಿಸ್ಥೆ ಸ್ವೋಚ್ಚೆ ಗುರುಸಮನ್ವಿತೆ।
ವಿದ್ಯಾವಾಂಶ್ಚ ಸುತಪ್ರಾಪ್ತೋ ಯೋಗಸ್ಸಂತಾನ
ಸಂಜ್ಞಕಃ ||೩||

ಟೀ| ಪಂಚಮಸ್ಥಾನಾಧಿಪತಿಯು ಐದನೇಸ್ಥಾನದಲ್ಲಿ
ದ್ದಾಗ್ಯೂ, ಉಚ್ಚಸ್ಥಾನದಲ್ಲಿದ್ದು ಗುರುವಿನಿಂದ ಕೇರಿ
ಸಂತಾನಯೋಗದಲ್ಲಿ ಜನಿಸಿದವನು ವಿದ್ಯಾವಂತನಾದಪು
ತ್ರನನ್ನು ಹೊಂದುವನು ||೩||

ಯೋಗೇಸಂತಾನಕೇಜಾತಸ್ಸುತೋಭಾಗ್ಯಸಮನ್ವಿ
ತಃ|ಧರ್ಮಶೀಲೋಮಹಾಭೋಗಿ ಪುತ್ರವಾನ್
ಭವತಿಧ್ರುವಂ ||೪||

ಟೀ|| ಈ ಸಂತಾನಯೋಗದಲ್ಲಿ ಹುಟ್ಟಿದಂಥ ಶಿಶುವು
ಧರ್ಮ ಸ್ವಭಾವವುಳ್ಳದ್ದಾಗಿಯೂ ಭಾಗ್ಯವಂತನಾಗಿ
ಯೂ ಭೋಗವಂತನಾಗಿಯೂ ಪುತ್ರವಂತನಾಗಿಯೂ
ಆಗುವನು ನಿಶ್ಚಯವು ||೪||

ಧನಯೋಗಃ

ಲಗ್ನೇಶೇಧನರಾಶಿಸ್ಥೇ ಧನೇಶೇಚಂದ್ರಸಂಯುತೇ ।
ವಿತ್ತೇಶುಕ್ರೇಣಸಂದೃಷ್ಟೇಯೋಗಃಕನಕಸಂಜ್ಞಕಃ ॥

ಟೀ॥ ಲಗ್ನಾಧಿಪತಿ ಎರಡನೆಯ ಸ್ಥಾನದಲ್ಲಿದ್ದಾಗ್ಯೂ ಎರಡನೆಯ ಸ್ಥಾನಾಧಿಪತಿ ಚಂದ್ರನು ಸಹಿತನಾಗಿದ್ದಾಗ್ಯೂ, ಎರಡನೆಯ ಸ್ಥಾನವು ಶುಕ್ರನಿಂದನೋಡಲ್ಪಟ್ಟರೂ ಅಂಥ ಕನಕ ಯೋಗದಲ್ಲಿ ಹುಟ್ಟಿದವನು ಧನವಂತನಾಗಿರುವನು ॥೧॥

ಲಾಭೇಶೇಸ್ವೋಚ್ಚರಾಶಿಸ್ಥೇ ವಿತ್ತೇಶುಕ್ರಸಮನ್ವಿತೇ ।
ಗುರುಣಾಸಂಯುತೇದೃಷ್ಟೇಯೋಗಃ ಕನಕಸಂಜ್ಞಕಃ ॥೨॥

ಟೀ॥ ಹನ್ನೊಂದನೆಯ ಸ್ಥಾನಾಧಿಪತಿ ಉಚ್ಚಸ್ಥಾನದಲ್ಲಿದ್ದರೂ, ಎರಡನೆಯ ಸ್ಥಾನವು ಶುಕ್ರನಿಂದಲೂ ಗುರುವಿನಿಂದಲೂ ಸೇರಿದ್ದಾಗ್ಯೂ ನೋಡಲ್ಪಟ್ಟಾಗ್ಯೂ, ಇಂಥಾ ಯೋಗದಲ್ಲಿ ಜನಿಸಿದವನು ಹಣವಂತನಾಗಿಹನು ॥೨॥

ಲಾಭೇಶೇ ಭೃಗುಸಂಯುಕ್ತೇ ಧನೇಶೇಧನವೀಕ್ಷಿತೇ । ಬೃಹಸ್ಪತೌಸ್ಥಿತೇಲಗ್ನೇಯೋಗೋಕನಕಸಂಜ್ಞಕಃ ॥

ಟೀ॥ ಹನ್ನೊಂದನೆಯ ಸ್ಥಾನಾಧಿಪತಿ ಶುಕ್ರನಿಂದ ಸೇರಿದ್ದರೂ, ಎರಡನೆಯ ಸ್ಥಾನಾಧಿಪತಿಯು ಎರಡನೆಯ ಸ್ಥಾನವನ್ನು ನಿರೀಕ್ಷಿಸಿದ್ದಾಗ್ಯೂ, ಅಥವಾ ಬೃಹಸ್ಪತಿಯು ಲಗ್ನದಲ್ಲಿದ್ದರೂ ಅಂಥ ಧನಯೋಗದಲ್ಲಿ ಹುಟ್ಟಿದವನು ಧನವಂತನಾಗಿರುವನು ... ॥೩॥

ಧನೇಶೇಸ್ವೋಚ್ಚರಾಶಿಸ್ಥೇ ಗುರುಣಾಯದಿವೀಕ್ಷಿತೇ ।

ವಿತ್ತಲಾಭಗತೆಶುಕ್ರಯೋಗಃಕನಕಸಂಜ್ಞಿಕಃ॥೪॥

ಟೀ॥ ಎರಡನೆಯ ಸ್ಥಾನಾಧಿಪತಿ ವೃಚ್ಚಸ್ಥಾನದಲ್ಲಿದ್ದ ರೂ, ಗುರುವಿನಿಂದ ನೋಡಲ್ಪಟ್ಟವನಾದರೂ ಶುಕ್ರನು ಎರಡನೆಯ ಸ್ಥಾನದಲ್ಲಾದರೂ, ಹನ್ನೊಂದನೆಯ ಸ್ಥಾನದಲ್ಲಾದರೂ ಇದ್ದಾಗ್ಯೂ ಇಂಥ ಧನಯೋಗದಲ್ಲಿ ಜನ್ಮಿಸಿದಾತನು ಧನವಂತನಾಗಿರುವನು ॥೩॥

ಗುರೌಶುಕ್ರಗತೆಭಾಗ್ಯೆಲಾಭೆಚಂದ್ರಸಮನ್ವಿತೆ।
ಸೌಮ್ಯಗ್ರಹಣಸಂದೃಷ್ಟೆಯೋಗಃಕನಕಸಂಜ್ಞಿಕಃ

ಟೀ॥ ಶುಕ್ರ ಬೃಹಸ್ಪತಿಗಳು ಒಂಭತ್ತನೆಯ ಸ್ಥಾನದಲ್ಲಿದ್ದಾಗ್ಯೂ, ಹನ್ನೊಂದನೆಯ ಸ್ಥಾನವು ಚಂದ್ರಸಹಿತವಾಗಿದ್ದಾಗ್ಯೂ, ಸೌಮ್ಯಗ್ರಹದಿಂದ ನಿರೀಕ್ಷಿಸಲ್ಪಟ್ಟಂಥಾದಾದಾಗ್ಯೂ ಇಂಥಾ ಕನಕಯೋಗದಲ್ಲಿ ಹುಟ್ಟಿದಂಥಾವನು ಕನಕವಂತನಾಗಿರುವನು ... ॥೫॥

ಧನಯೋಗೇತ್ರುಯೋಜಾತೊ ಧನಾಢ್ಯೊನೃಪ
ಪೂಜಿತಃ । ಧನಧಾನ್ಯಾಧಿಪಶ್ರೀಮಾನ್ ಧನಾಧೀ
ಶೋನಸಂಶಯಃ ... ॥೬॥

ಟೀ ।ಧನಯೋಗದಲ್ಲಿಹುಟ್ಟಿದಂಥಾತನು ಧನಾಢ್ಯನಾಗಿ, ರಾಜಪೂಜಿತನಾಗಿ, ಧನಕ್ಕೂ ಧಾನ್ಯಕ್ಕೂ ಅಧಿಪತಿಯಾಗಿ ಶ್ರೀಮಂತನಾಗಿಯೂ ಇರುವನು ಸಂಶಯವಿಲ್ಲ॥೬

-----*-----

ವಿದ್ಯಾಯೋಗಃ.

ಜ್ಞಾನೇಶೆಪರಮೋಚ್ಚಸ್ಥೆಗುರುಣಾಯದಿವೀಕ್ಷಿತೆ!
ವೇದವೇದಾಂಗಸಂಪನ್ನಃಗ್ರಂಥಕರ್ತಾಭವೆನ್ನರಃ॥

ಟೀ॥ ಐದನೆಯ ಸ್ಥಾನಾಧಿಪತಿ ಉಚ್ಚಸ್ಥಾನದಲ್ಲಿದ್ದಾಗ್ಯೂ, ಗುರುವಿನಿಂದ ನೋಡಲ್ಪಟ್ಟವನಾದಾಗ್ಯೂ ಇಂಥಾ ವಿದ್ಯಾಯೋಗದಲ್ಲಿ ಹುಟ್ಟಿದಂಥಾತನು ವೇದದಿಂದಲೂ, ವೇದಾಂಗಗಳಿಂದಲೂ ಕೂಡಿದವನಾಗಿ ಗ್ರಂಥಗಳ ಕವಿತ್ವ ಪದ್ಧತಿಯಂ ತಿಳಿಯುವವನಾಗುತ್ತಾನೆ ॥೧॥

ಜ್ಞಾನೇಶೇಗುರುಸಂಯುಕ್ತೇಗುರುಣಾಯದಿವೀಕ್ಷಿತೇ।
ಸರ್ವಶಾಸ್ತ್ರಸ್ಯಸಂಪೂರ್ಣಃಕವಿತ್ವಕುಶಲೋನರಃ॥

ಟೀ॥ ಐದನೆಯ ಸ್ಥಾನಾಧಿಪತಿ ಗುರುವಿನಿಂದ ಕೇರಿದ್ದಾಗ್ಯೂ ಅಥವಾ ನೋಡಲ್ಪಟ್ಟವನಾದಾಗ್ಯೂ, ಅಂಥ ವಿದ್ಯಾಯೋಗದಲ್ಲಿ ಪುಟ್ಟಿದಾತನು ಸರ್ವಶಾಸ್ತ್ರಗಳಿಂದ ಪೂರ್ಣನಾಗಿ ಕವಿತ್ವದಲ್ಲಿ ನಿಪುಣನಾಗಿಯೂ ಇರುವನು॥

ಶುಕ್ರಸ್ಸೌರಿಯುತೇಕೇತೌಜ್ಞಾನೇಶೇನಸಮನ್ವಿತೇ।ಚತುಃ
ಷಷ್ಟಿಕಳಾಯುಕ್ತೋಗಣಿತಜ್ಯೋತಿಷವಿನ್ನರಃ ॥೨॥

ಟೀ॥ ಕೇತು ಶುಕ್ರನಿಂದ ಶನಿಯಿಂದ ಸಹಿತನಾಗಿದ್ದು ಸ್ಥಾನಾಧಿಪತಿಯಿಂದ ಕೇರಿದ್ದರೂ ಇಂಥಾ ವಿದ್ಯಾಯೋಗದಲ್ಲಿ ಹುಟ್ಟಿದವನು ಅರವತ್ತುನಾಲ್ಕು ವಿದ್ಯೆಗಳಿಂದ ಸಮೇತನಾಗಿ ಜ್ಯೋತಿಶ್ಶಾಸ್ತ್ರವೇತ್ತನಾಗಿಯೂ ಇರುವನೆಂದು ಭಾವವು ... ॥೨॥

ಶನಿರಾಹುಬುಧಶ್ಚಂದ್ರೈರ್ವಿಕ್ಷಿತೋಂಗಾರಕೋಯ
ದಿ। ತರ್ಕಶಾಸ್ತ್ರಪುಕುಶಲಃವಿದ್ಯಾವಾಂಶ್ಚನಸಂ
ಶಯಃ ... ... ॥೪॥

ಟೀ॥ ಅಂಗಾರಕನು ಶನಿಯಿಂದಲೂ, ರಾಹುವಿನಿಂದಲೂ, ಬುಧ ಚಂದ್ರರಿಂದಲೂ, ನೋಡಲ್ಪಟ್ಟವನಾದರೆ

ಅಂಥಾ ವಿದ್ಯಾಯೋಗದಲ್ಲಿ ಜನಿಸಿದಾತನು ತರ್ಕಶಾಸ್ತ್ರ ಪ್ರವೀಣನಾಗಿರುವನು. ಸಂದೇಹವಿಲ್ಲ ॥೪॥

ಪರಮೋಚ್ಚಸ್ಥಿತೇಸೌಮ್ಯೇಜ್ಞಾನೇಶೇಚಂದ್ರಸಂಯು
ತೇ ।ಮೀಮಾಂಸಾಶಾಸ್ತ್ರಸಂಪನ್ನೋಶಾಸ್ತ್ರೇಭ
ರತವಿಶ್ರುತಃ ॥೫॥

ಟೀ॥ ಬುಧನು ಉಚ್ಚಸ್ಥಾನದಲ್ಲಿ ಇದ್ದಾಗ್ಯೂ ಪಂಚಮಸ್ಥಾನಾಧಿಪತಿ ಚಂದ್ರ ಸಹಿತನಾಗಿದ್ದಾಗ್ಯೂ ಅಂಥಾ ವಿದ್ಯಾಯೋಗದಲ್ಲಿ ಜನಿಸಿದಾತನು ಮೀಮಾಂಸಾ ಶಾಸ್ತ್ರದಲ್ಲಿಯೂ ಭರತಶಾಸ್ತ್ರದಲ್ಲಿಯೂ ಪ್ರವೀಣನಾಗಿರುವನು ॥೫॥

ವಿದ್ಯಾಯೋಗೇತುಯೋಜಾತೋವಿದ್ವಜ್ಜನಸುಪೂ
ಜಿತಃ । ಸರ್ವವಿದ್ಯಾಸುಸಂಪನ್ನಃವಿದ್ಯಾಧೀಶೋ
ನಸಂಶಯಃ ॥೬॥

ಟೀ॥ ವಿದ್ಯಾಯೋಗದಲ್ಲಿ ಹುಟ್ಟಿದಂಥಾತನು ವಿದ್ವಾಂಸರಿಂದ ಪೂಜಿತನಾಗಿಯೂ, ಸರ್ವ ವಿದ್ಯಂಗಳಿಂದ ಸಂಪೂರ್ಣನಾಗಿ ವಿದ್ಯಗಳಿಗೆ ಅಧಿಪತಿಯಾಗಿಯೂ ಇರುವನು. ಸಂಶಯವಿಲ್ಲ ॥೬॥

---o---

ಕ್ಷೇತ್ರಯೋಗಃ

ಕ್ಷೇತ್ರೇಶೇ ಸ್ವೋಚ್ಚರಾಶಿಸ್ಥೇ ಲಗ್ನೇಶೇನಸಮನ್ವಿತೇ ।
ಗುರುಣಾಸಂಯುತೇದೃಷ್ಟೇಯೋಗೋವೈಕ್ಷೇತ್ರಸಂ
ಜ್ಞಿಕಃ ॥೧॥

ಟೀ॥ ಕ್ಷೇತ್ರಾಧಿಪತಿ ಉಚ್ಚಸ್ಥಾನದಲ್ಲಿದ್ದಾಗ್ಯೂ,

ಲಗ್ನಾಧಿಪತಿಯಿಂದ ಶೇರಿದ್ದಾಗ್ಯೂ, ಗುರುವಿನಿಂದ ಶೇರಿದ್ದಾಗ್ಯೂ ನೋಡಲ್ಪಟ್ಟವನಾದಾಗ್ಯೂ, ಕ್ಷೇತ್ರಯೋಗದಲ್ಲಿ ಹುಟ್ಟಿದಂಥಾತನು ಕ್ಷೇತ್ರವನ್ನು ಸಂಪಾದಿಸಶಕ್ಯವನಾಗುತ್ತಾನೆ ||೧||

ಪಾತಾಳೇಗುರುಸಂಯುಕ್ತೇ ತದೀಶೇಶುಭಸಂಯು
ತೇ ! ಭೃಗುಪುತ್ರೇಣಸಂದೃಷ್ಟೇಯೋಗೋವೈಕ್ಷೇತ್ರ
ಸಂಜ್ಞಕಃ ||೨||

ಟೀ|| ನಾಲ್ಕನೆಯ ಸ್ಥಾನವು ಗುರುವಿನಿಂದ ಶೇರಿದ್ದಾಗ್ಯೂ ನಾಲ್ಕನೇ ಸ್ಥಾನಾಧಿಪತಿ ಶುಭಗ್ರಹದಿಂದ ಶೇರಿದ್ದಾಗ್ಯೂ ಶುಕ್ರನಿಂದ ನೋಡಲ್ಪಟ್ಟಂಥಾವನಾದಾಗ್ಯೂ ಇಂಥಾ ಕ್ಷೇತ್ರಯೋಗದಲ್ಲಿ ಜನಿಸಿದವನು ಭೂಮಿಯನ್ನು ಸಂಪಾದಿಸುವವನಾಗುವನು ||೨||

ಚತುರ್ಥೇಕುಜವುಚ್ಚಸ್ಥೇ ತದೀಶೇಗುರುಸಂಯುತೇ!
ಬಹುಕ್ಷೇತ್ರಾಭಿ ವೃದ್ಧಿಸ್ಯಾತ್ ಯೋಗೋವೈಕ್ಷೇತ್ರ
ಸಂಜ್ಞಕಃ ||೩||

ಟೀ|| ಅಂಗಾರಕನು ನಾಲ್ಕನೆಯ ಸ್ಥಾನದಲ್ಲಿದ್ದಾಗ್ಯೂ ಉಚ್ಚಸ್ಥಾನದಲ್ಲಿದ್ದರೂ ನಾಲ್ಕನೆಯಸ್ಥಾನಾಧಿಪತಿ ಗುರುವಿನಿಂದ ಶೇರಿದ್ದರೂ, ಇಂಥಾ ಕ್ಷೇತ್ರಯೋಗದಲ್ಲಿ ಹುಟ್ಟಿದಾತನು ಅಧಿಕವಾದ ಕ್ಷೇತ್ರಗಳನ್ನು ಸಂಪಾದಿಸುವವನಾಗುತ್ತಾನೆ ||೩||

ಕ್ಷೇತ್ರೇಶೇಭೃಗುಸಂಯುಕ್ತೇ ಚತುರ್ಥೇಕುಜವೀಕ್ಷಿತೇ।
ಗುರೌಚಂದ್ರೈಸ್ಥಿತೇಕ್ಷೇತ್ರೇ ಯೋಗೋವೈಕ್ಷೇತ್ರಸಂ
ಜ್ಞಕಃ ||೪||

ಟೀ॥ ಕ್ಷೇತ್ರಾಧಿಪತಿ ಶುಕ್ರನಿಂದ ಕೇರಿದ್ದಾಗ್ಯೂ ಚತುರ್ಥಸ್ಥಾನವು ಅಂಗಾರಕನಿಂದ ನೋಡಲ್ಪಟ್ಟಂಥಾದ್ದಾದಾಗ್ಯೂ ಗುರ ಚಂದ್ರನು ಕ್ಷೇತ್ರಸ್ಥಾನದಲ್ಲಿದ್ದಾಗ್ಯೂ ಇಂಥಾ ಕ್ಷೇತ್ರಯೋಗದಲ್ಲಿ ಹುಟ್ಟಿದವನು ಭೂಮಿಯನ್ನು ಸಂಪಾದಿಸುವನು ॥೫॥

ಕ್ಷೇತ್ರೇಶೇಕ್ಷೇತ್ರರಾಶಿಸ್ಥೇಸ್ವೋಚ್ಚೇಕುಜಸಮನ್ವಿತೆ ।
ಶುಭಗ್ರಹೇಣಸಂದೃಷ್ಟೆ ಯೋಗೋವೈಕ್ಷೇತ್ರಸಂ
ಜ್ಞಕಃ ॥೬॥

ಟೀ॥ ಕ್ಷೇತ್ರಾಧಿಪತಿ ಸ್ವಕ್ಷೇತ್ರದಲ್ಲಿದ್ದರೂ, ಉಚ್ಚಸ್ಥಾನದಲ್ಲಿದ್ದರೂ, ಅಂಗಾರಕನಿಂದ ಕೇರಿದ್ದರೂ, ಶುಭಗ್ರಹಗಳಿಂದ ನೋಡಲ್ಪಟ್ಟರೂ, ಇಂಥಾಕ್ಷೇತ್ರಯೋಗದಲ್ಲಿ ಜನಿಸಿದವನು ಭೂಮಿಯನ್ನು ಸಂಪಾದಿಸುವನು॥

ಕ್ಷೇತ್ರಯೋಗೆತುಯೋಜಾತೋಬಹು ಕ್ಷೇತ್ರಾಭಿಪಾ
ಲಿತಃ । ಸ್ವಧರ್ಮಸಹಿತೋಮರ್ತ್ಯಃಕ್ಷೇತ್ರಾಧೀ
ಶೋನಸಂಶಯಃ ॥೭॥

ಟೀ॥ ಕ್ಷೇತ್ರಯೋಗದಲ್ಲಿ ಹುಟ್ಟಿದಂಥ ಮನುಷ್ಯನು ಅಧಿಕವಾಗಿ ಕ್ಷೇತ್ರಗಳಿಂದ ಪಾಲಿತನಾಗಿ ಸ್ವಧರ್ಮದಿಂದ ಸಹಿತನಾಗಿ ಕ್ಷೇತ್ರಾಧಿಪತಿಯಾಗಿಯೂ ಇರುವನು ಸಂದೇಹವಿಲ್ಲ ॥೭॥

ಕ್ಷಾತ್ರಿಯಯೋಗಃ

ವಿಕ್ರಮಾಧಿಪತಿಸ್ಸ್ವೋಚ್ಚೇ ಭೂಮಿಪುತ್ರೇಣವೀ
ಕ್ಷಿತೆ । ಮಹಾಶೂರೋಭವತ್ಯತ್ಯಂಯೋಗೋಕ್ಷಾ
ತ್ರಿಯಸಂಜ್ಞಕಃ ॥೧॥

ಟೀ|| ಮೂರನೆಯ ಸ್ಥಾನಾಧಿಪತಿ ಉಚ್ಚಸ್ಥಾನದಲ್ಲಿ ಇದ್ದಾಗ್ಯೂ ಅಂಗಾರಕನಿಂದ ನೋಡಲ್ಪಟ್ಟಂಥವನಾದಾಗ್ಯೂ ಅಂಥಾ ಕ್ಷಾತ್ರಿಯಯೋಗದಲ್ಲಿ ಹುಟ್ಟಿದಂಥಾವನು ಮಹಾತ್ಮನಾಗಿಯೂ, ಪರಾಕ್ರಮಶಾಲಿಯಾಗಿಯೂ ಇಹನು ಯಥಾರ್ಥವು ||೧||

ಧೈರ್ಯಸ್ಥಾನಗತೇಪಾಪೇ ಧೈರ್ಯೇಶೇನಸಮನ್ವಿತೇ !
ಧೈರ್ಯವಾಂಶ್ಚಂಭವೇತ್ಸತ್ಯಂಯೋಗಃಕ್ಷಾತ್ರಿಯಸಂ
ಜ್ಞಿಕಃ ||೨||

ಟೀ|| ಪಾಪಗ್ರಹವು ಮೂರನೆಯ ಸ್ಥಾನದಲ್ಲಿ ಇದ್ದಾಗ್ಯೂ, ಮೂರನೆಯ ಸ್ಥಾನಾಧಿಪತಿಯಿಂದ ಕೇರಿದ್ದರೂ, ಇಂಥಾಕ್ಷಾತ್ರಿಯ ಯೋಗದಲ್ಲಿ ಹುಟ್ಟಿದವನು ಧೈರ್ಯಶಾಲಿಯಾಗಿರುವನು. ಯಥಾರ್ಥವು ||೨||

ಧೈರ್ಯೇಷಷ್ಟಯುತೇಕ್ರೂರೇಶುಭಗ್ರನಿಹರೀಕ್ಷಿತೇ !
ಕೀರ್ತಿಮಾಂಶ್ಚಭವೇಶ್ಶೂರೋ ಯೋಗಃಕ್ಷಾತ್ರಿಯ
ಸಂಜ್ಞಿಕಃ ||೩||

ಟೀ|| ಮೂರನೆಯ ಸ್ಥಾನವು ಆರನೆಯ ಸ್ಥಾನವು ಕ್ರೂರಗ್ರಹಗಳಿಂದ ಕೇರಿ ಶುಭಗ್ರಹಗಳಿಂದ ನೋಡದೆ ಹೋದರೆ ಇಂಥಾಕ್ಷತ್ರಿಯ ಯೋಗದಲ್ಲಿ ಹುಟ್ಟಿದವನು ಕೀರ್ತಿವಂತನು, ಪರಾಕ್ರಮವಂತನು ಆಗುವನು||

ಧೈರ್ಯಸ್ಥಾನಾಧಿಪೇಧೈರ್ಯೇಪಾಪಗ್ರಹನಿರೀಕ್ಷಿತೇ
ಜಯವಾಂಶ್ಚಭವೇಚ್ಛೂರೋ ಯೋಗಃಕ್ಷಾತ್ರಿಯ
ಸಂಜ್ಞಿಕಃ ||೪||

ಟೀ| ಮೂರನೆಯ ಸ್ಥಾನಾಧಿಪತಿ ಮೂರನೆಯ

ಸ್ಥಾನದಲ್ಲಿದ್ದು ಶುಭಗ್ರಹಗಳಿಂದ ನಿರೀಕ್ಷಿಸಲ್ಪಟ್ಟವ ನಾದರೆ ಇಂಥಾ ಕ್ಷತ್ರಿಯ ಯೋಗದಲ್ಲಿ ಹುಟ್ಟಿದವನು ಜಯವಂತನಾಗಿಯೂ, ಪರಾಕ್ರಮ ಶಾಲಿಯಾಗಿಯೂ ಆಗುತ್ತಾನೆ ||೪||

ಲಗ್ನೇಶೇಪರಮೋಚ್ಚಸ್ಥೆ ವಿಕ್ರಮೇಶಸಮನ್ವಿತೆ | ಮ
ಹಾಶೂರೋಮಹಾಖ್ಯಾತೋ ಯೋಗಃ ಕ್ಷಾತ್ರಿಯ
ಸಂಜ್ಞಿಕಃ ||೫||

ಟೀ|| ಲಗ್ನಾಧಿಪತಿ ಉಚ್ಚಸ್ಥಾನದಲ್ಲಿದ್ದಾಗ್ಯೂ, ಮೂರನೆಯ ಸ್ಥಾನಾಧಿಪತಿಯಿಂದ ಕೇರಿದ್ದಾಗ್ಯೂ, ಇಂಥಾ ಕ್ಷತ್ರಿಯ ಯೋಗದಲ್ಲಿ ಜನಿಸಿದವನು ಮಹಾಶೂರನಾಗಿಯೂ ಮಹಾ ಪ್ರಖ್ಯಾತವಂತನಾಗಿಯೂ ಇರುವನು ||೫||

ಯೋಗೋಕ್ಷಾತ್ರಿಯಕೇಜಾತೋಕ್ಷತ್ರಧರ್ಮೆಸದಾರ
ತಃ |ಮಹಾಶೂರೋಮಹಾಖ್ಯಾತೋಯದ್ಧವಾನ್
ದೃಢವಾನ್ ಭವೇತ್ ... ||೬||

ಟೀ|| ಇಂಥಾ ಕ್ಷತ್ರಿಯ ಯೋಗದಲ್ಲಿ ಹುಟ್ಟಿದವನು ನಿರಂತರವು ಕ್ಷತ್ರಧರ್ಮದಲ್ಲಿ ಆಸಕ್ತನಾಗಿ ಮಹಾ ಪ್ರಸಿದ್ಧವಂತನಾಗಿಯೂ ಇರುತ್ತಾನು ||೬||

---o---

ಭೂಪತಿಯೋಗಃ.

ಗುರೌಚಂದ್ರಯುತೆಕೇಂದ್ರ ಮಾನಾಧಿಪಸಮ
ನ್ವಿತೆ | ಲಗ್ನೇಶೆಲಗ್ನಭಾವಸ್ಥೆಯೋಗೋಭೂಪತಿ
ಸಂಜ್ಞಿಕಃ ... ||೧||

ಟೀ॥ ಗುರು ಚಂದ್ರನಿಂದ ಕೇರಿದ್ದಾಗ್ಯೂ, ಕೇಂದ್ರ ಸ್ಥಾನವು ಮಾನಾಧಿಪನಿಂದ ಕೇರಿದ್ದಾಗ್ಯೂ ಲಗ್ನಾಧಿಪತಿ ಲಗ್ನಭಾವದಲ್ಲಿದ್ದಾಗ್ಯೂ ಇಂಥಾ ಯೋಗದಲ್ಲಿ ಹುಟ್ಟಿದಾತನು ಭೂಪತಿ ಆಗುವನು ॥೧॥

ಲಗ್ನೇಶೇಮಾನರಾಶಿಸ್ಥೆ ಸ್ವೋಚ್ಚೆ ಗುರುನಿರೀಕ್ಷಿತೇ ।
ಭಾಗ್ಯೇಶುಕ್ರೆ ತುಯೋಜಾತೋ ಯೋಗೋಭೂಪತಿಸಂಜ್ಞಕಃ ... ॥೨॥

ಟೀ॥ ಲಗ್ನಾಧಿಪತಿ ಮಾನರಾಶಿಯಲ್ಲಿದ್ದಾಗ್ಯೂ ಉಚ್ಚ ಸ್ಥಾನದಲ್ಲಿದ್ದಾಗ್ಯೂ ಗುರುವಿನಿಂದ ನೋಡಲ್ಪಟ್ಟವನಾದರೂ, ಶುಕ್ರನು ಒಂಭತ್ತನೆಯ ಸ್ಥಾನದಲ್ಲಿದ್ದಗೂ ಇಂತಾ ಭೂಪತಿ ಯೋಗದಲ್ಲಿ ಜನಿಸಿದವನು ಭೂಮಿಗೆ ಪತಿಯಾಗುವನು ... ॥೨॥

ಲಗ್ನೇಶೇಗುರುಸಂಯುಕ್ತೇ ಸ್ವೋಚ್ಚೇ ಗುರುನಿರೀಕ್ಷಿತೇ!
ಕೇಂದ್ರೇ ಕೇಂದ್ರೇಶದೃಷ್ಟೇತು ಯೋಗೋಭೂಪತಿಸಂಜ್ಞಕಃ ... ॥೩॥

ಟೀ॥ ಲಗ್ನಾಧಿಪತಿಯೂ ಗುರುವಿನಿಂದ ನೋಡಲ್ಪಟ್ಟಂಥವನಾದಾಗ್ಯೂ, ಕೇಂದ್ರಸ್ಥಾನವು ಕೇಂದ್ರಾಧಿಪತಿಯಿಂದ ವೀಕ್ಷಿಸಲು ಇಂಥ ಭೂಪತಿ ಯೋಗದಲ್ಲಿ ಹುಟ್ಟಿದಾತನು ಭೂಪತಿಯಾಗಿರುವನು ॥೩॥

ಲಗ್ನೇಶೇಪರಮೋಚ್ಚಸ್ಥೆ ಕೇಂದ್ರಕೋಣೇಗುರುಸ್ಥಿತೇ।
ಬುಧೇಶುಕ್ರೇಸ್ಥಿತೇಲಗ್ನೆ ಯೋಗೋಭೂಪತಿಸಂಜ್ಞಕಃ॥

ಟೀ ॥ ಲಗ್ನಾಧಿಪತಿ ಉಚ್ಚಸ್ಥಾನದಲ್ಲಿದ್ದಾಗ್ಯೂ ಗುರು ಕೇಂದ್ರದಲ್ಲಾದರೂ ಕೋಣಸ್ಥಾನದಲ್ಲಾದರೂ

ಇದ್ದಾಗ್ಯೂ, ಬುಧನು ಶುಕ್ರನು ಲಗ್ನದಲ್ಲಿದ್ದಾಗ್ಯೂ, ಅಂಥಾ ಯೋಗದಲ್ಲಿಜನಿಸಿದವನುಭೂಪತಿಯಾಗಿರುವನು.

ಉಚ್ಚಂಗತೇಯದಾಭೌಮೋಉಚ್ಚಾಂಶೇಚಚತುರ್ಥ
ಗೇ। ಗುರುಚಂದ್ರೇಣಸಂದೃಷ್ಟ ಯೋಗೋಭೂ
ಪತಿಸಂಜ್ಞಕಃ ... ।೫॥

ಟೀ॥ ಅಂಗಾರಕನು ಉಚ್ಚಸ್ಥಾನದಲ್ಲಿದ್ದರೂ ಉಚ್ಚಾಂಶದಲ್ಲಿದ್ದಾಗ್ಯೂ, ನಾಲ್ಕನೆಯ ಸ್ಥಾನದಲ್ಲಿದ್ದಾಗ್ಯೂ ಗುರು ಚಂದ್ರನಿಂದ ನೋಡಲ್ಪಟ್ಟಂಥವನಾದಾಗ್ಯೂ, ಇಂಥಾ ಯೋಗದಲ್ಲಿ ಹುಟ್ಟಿದಂಥವನು ಭೂಪತಿಯಾಗಿರುವನು ... ॥೫॥

ಸಾಮ್ರಾಜ್ಯಯೋಗಃ.

ಕ್ರೂರಾರಿಲಾಭೇಕುಜಸೂರ್ಯಸೌಮ್ಯಬಾಣೇಶಶುಕ್ರೇ
ಗುರುಭಾಗ್ಯಸೌಮ್ಯೇ। ಸ್ಮರೇಂದುಕೇಟಾಃಕ್ರಮ
ಶೋಭವಂತಿಸಾಮ್ರಾಜ್ಯಯೋಗಂಮುನಯೋವದಂತಿ॥

ಟೀ॥ ಅಂಗಾರಕನು ಮೂರನೆಯ ಸ್ಥಾನದಲ್ಲಿದ್ದಾಗ್ಯೂ, ಬುಧನು ಹನ್ನೊಂದನೆಯ ಸ್ಥಾನದಲ್ಲಿದ್ದರೂ, ಶುಕ್ರನು ಪಂಚಮ ಸ್ಥಾನಾಧಿಪತಿ ಆದಾಗ್ಯೂ, ಗುರು ಒಂಭತ್ತನೆಯ ಸ್ಥಾನದಲ್ಲಿದ್ದರೂ, ಬುಧನು ಏಳನೆಯ ಸ್ಥಾನದಲ್ಲಿದ್ದರೂ, ಚಂದ್ರನು ಕರ್ಕಾಟಕ ಲಗ್ನದಲ್ಲಿದ್ದರೂ, ಮೇಲೆ ಉದಹರಿಸಲ್ಪಟ್ಟ ಗ್ರಹಗಳು ಕ್ರಮವಾಗಿ ಆಯಾಯ ಸ್ಥಳದಲ್ಲಿದ್ದ ಸಮಯದಲ್ಲಿ ಜನಿಸಿದವಂಗೆ ಸಾಮ್ರಾಜ್ಯ ಯೋಗವೆಂಬದಾಗಿ ಋಷಿಗಳು ಹೇಳುತ್ತಾರೆ॥

ಕನ್ಯಾದಿಕೇಂದ್ರೇಶನಿಸೂರ್ಯಭೌಮೌ ಕ್ರಮಾಜ್ಝಷೇ
ಶುಕ್ರವೃಷೇನಿಶಾಕರೇ । ಕುಳೀರಲಗ್ನೆ ಗುರುಮಾಶ್ರ
ಯಂತಿಸಾಮ್ರಾಜ್ಯಯೋಗಂಮುನಯೋವದಂತಿ ॥೧॥

ಟೀ ॥ ಶನಿ ಕನ್ಯಾರಾಶಿ ಒಳಗೆ ಇದ್ದಾಗ್ಯೂ ಸೂರ್ಯನು ತುಲಾರಾಶಿಯೊಳಗೆ ಇದ್ದಾಗ್ಯೂ, ಅಂಗಾರಕನು ವೃಶ್ಚಿಕರಾಶಿಯೊಳಗೆ ಇದ್ದರೂ, ಶುಕ್ರನು ವೃಷಭರಾಶಿಯಲ್ಲಿದ್ದರೂ, ಚಂದ್ರನು ಕರ್ಕಾಟಕ ರಾಶಿಯಲ್ಲಿದ್ದರೂ, ಲಗ್ನವನ್ನು ಗುರು ಆಶ್ರಯಿಸಿದ್ದರೂ, ಇಂಥಾ ಯೋಗದಲ್ಲಿ ಹುಟ್ಟಿದಂಥವನಿಗೆ ಸಾಮ್ರಾಜ್ಯ ಯೋಗವೆಂಬದಾಗಿ ಋಷಿಗಳು ಹೇಳುತ್ತಾರೆ ... ॥೨॥

ನಕ್ರಾದಿಕೇಂದ್ರೇಕುಜಮಂತ್ರಿಸೌರಿಃವೃಷೇಂದುರಾ
ಹೂಕ)ಮಸೌಮ್ಯನಾರೀ । ನಕ್ರಾದಯೇಜಾತಶಿ
ಶೋಶ್ಚನಿತ್ಯಂಸಾಮ್ರಾಜ್ಯಯೋಗಂಮುನಯೋವದಂತಿ॥

ಟೀ ॥ ಅಂಗಾರಕನು ಮಕರರಾಶಿಯಲ್ಲಿದ್ದಾಗ್ಯೂ, ಗುರು ಕುಂಭರಾಶಿಯಲ್ಲಿದ್ದಾಗ್ಯೂ, ವೃಷಭ ರಾಶಿಯಲ್ಲಿ ಚಂದ್ರನು ರಾಹು ಇದ್ದಾಗ್ಯೂ ಕನ್ಯಾರಾಶಿಯಲ್ಲಿ ಬುಧನಿದ್ದರೂ ಮೇಲೆ ಹೇಳಿರುವ ಗ್ರಹಗಳು ಮಕರರಾಶಿ ಆದಿಯಾದಂಥ ರಾಶಿಗಳ ಸಮಯದೊಳ್ಳು ಹುಟ್ಟಿದ ಮಕ್ಕಳಿಗೆ ಸಾಮ್ರಾಜ್ಯ ಯೋಗವೆಂಬದಾಗಿ ಋಷಿಗಳು ಹೇಳುತ್ತಾರೆ ... ॥೩॥

ಲಗ್ನೇಶಬಾಣಸ್ತ್ರಿರಲಾಭಗಸ್ಥೆ ವೇದೇಚಮಂತ್ರೀಬುಧ
ಭೂಮಿಜೇಚ।ಪ್ರಾಪ್ತೋದಯಂಭಾರ್ಗವಮಾಶ್ರ
ಯಂತಿಸಾಮ್ರಾಜ್ಯಯೋಗಂಮುನಯೋವದಂತಿ ॥೪॥

ಟೀ॥ ಲಗ್ನಾಧಿಪತಿಯು ಐದನೆಯಸ್ಥಾನದಲ್ಲಿದ್ದಾಗಲೂ ಏಳನೆಯಸ್ಥಾನದಲ್ಲಿದ್ದರೂ, ಹನ್ನೊಂದನೆಯ ಸ್ಥಾನದಲ್ಲಿದ್ದಾಗಲೂ, ಗುರು ನಾಲ್ಕನೆಯ ಸ್ಥಾನದಲ್ಲಿದ್ದರೂ, ಬುಧನು ಅಂಗಾರಕನು ಉದಯವಾದಂಥ ಶುಕ್ರನನ ಹೊಂದಿದ್ದರೂ, ಇಂಥಾ ಸಾಮ್ರಾಜ್ಯಯೋಗದಲ್ಲಿ ಹುಟ್ಟಿದಂಥವರು ಸಾಮ್ರಾಜ್ಯ ಯೋಗವನ್ನು ಹೊಂದುತ್ತಾರೆಂಬದಾಗಿ ಋಷಿಗಳು ಹೇಳುತ್ತಾರೆ ॥೪॥

ನೇತ್ರಾದಿಧರ್ಮದಶಲಾಭಗೆಸ್ಥೆ ಸೌರಿಸ್ಥಿತೇಂದೌಸ
ಮವಾಕ್ಪತಿಸ್ಥೆ। ಲಗ್ನೇಂದುಜೆಸ್ವೋಚ್ಚಗತೇಕ್ರಮಾ
ಚ್ಚ ಸಾಮ್ರಾಜ್ಯಯೋಗಂಮುನಯೊವದಂತಿ ॥೫॥

ಟೀ॥ ನೇತ್ರ ಸ್ಥಾನದಲ್ಲಯೂ, ಧರ್ಮ ಸ್ಥಾನದಲ್ಲಿಯೂ, ಲಾಭ ಸ್ಥಾನದಲ್ಲಯೂ ಶನಿಯಿದ್ದರೂ, ಚಂದ್ರನು ಬೃಹಸ್ಪತಿ ಸಮೇತನಾಗಿದ್ದರೂ ಲಗ್ನದಲ್ಲಿ ಬುಧನಿದ್ದರೂ, ಮೇಲೆ ಉದಹರಿಸಿರುವ ಗ್ರಹಂಗಳು ಉಚ್ಚಸ್ಥಾನಂಗತರಾದ ವೇಳೆಯಲ್ಲಿ ಹುಟ್ಟಿದವನಿಗೆ ಸಾಮ್ರಾಜ್ಯಯೋಗವೆಂದು ಋಷಿಗಳು ಹೇಳುತ್ತಾರೆ ॥೫॥

ಮೇಷಾದಿಕೇಂದ್ರೆಗುರುಸೌರಿಭೌಮೆ ಕ್ರಮಾದ್ಗ
ತೇಂದೌವೃಷರಾಹುಯಾಮ್ಯೆ। ಅಜೋದಯೆಭಾಗರ್
ವಮಾಶ್ರಯಂತಿಸಾಮ್ರಾಜ್ಯಯೋಗಂಮುನಯೊ
ವದಂತಿ ... ॥೬॥

ಟೀ॥ ಗುರು ಮೇಷರಾಶಿಯಲ್ಲಿ ಶನಿಯು ವೃಷಭರಾಶಿಯಲ್ಲಿ ಅಂಗಾರಕನು, ಮಿಥುನರಾಶಿಯಲ್ಲಿ ಇವರುಗಳು ಕೇಂದ್ರಸ್ಥಾನದಲ್ಲಿದ್ದರೂ, ಚಂದ್ರನು ವೃಷಭರಾಶಿಯ

ಲ್ಲಿದ್ದರೂ, ರಾಹು ಯಾವ್ಯಸ್ಥಾನದಲ್ಲಿದ್ದಗೂ ಮೇಷ ರಾಶಿಯಲ್ಲಿ ಉದಯವಾದಂಥ ಶುಕ್ರನಿಂದ ಈ ಮೇಲೆ ಉದಹರಿಸಿರುವ ನವಗ್ರಹಗಳು ಸೇರಿರುವ ವೇಳೆಯಲ್ಲಿ ಜನಿಸಿದವನಿಗೆ ಸಾಮ್ರಾಜ್ಯ ಯೋಗವೆಂಬದಾಗಿ ಋಷಿಗಳು ಹೇಳುತ್ತಾರೆ ... ||೬||

---*---

ಸಾರ್ವಭೌಮಯೋಗಃ.

ವರ್ಗೋತ್ತಮಗತೇಜೀವೆ ಸೋಚ್ಚೆ ಚಂದ್ರಸಮನ್ವಿತೇ । ಲಗ್ನೆ ಶುಕ್ರೋ ಯದಾಜಾತಃ ಸಾರ್ವಭೌಮೋಭವೆನ್ನರಃ ... ||೧||

ಟೀ|| ಬೃಹಸ್ಪತಿ ಗ್ರಹವು ವರ್ಗಸ್ಥಾನವನ್ನು ಹೊಂದಿದ್ದಾಗ್ಯೂ ಈ ಗ್ರಹವೆಉಚ್ಚಸ್ಥಾನದಲ್ಲಿದ್ದು ಶಶಾಂಕನಿಂದೊಡಗೂಡಿದಾಗ್ಯೂ ಶುಕ್ರಗ್ರಹವು ಲಗ್ನದಲ್ಲಿದ್ದ ಸಮಯದಲ್ಲಿ ಹುಟ್ಟಿದವನು ಸಾರ್ವ ಭೌಮತ್ವವನ್ನು ಹೊಂದುತ್ತಾನೆ ... ||೧||

ವರ್ಗೋತ್ತಮಗತೆಸೌರಿ ಸ್ವೋಚ್ಚೆ ಶುಕ್ರ ಸಮನ್ವಿತೆ । ಲಗ್ನೆ ಮಂತ್ರಿ ಯದಾಜಾತಃ ಸಾರ್ವಭೌಮೋಭವೆನ್ನರಃ ... ||೨||

ಟೀ|| ಶನೈಶ್ಚರನು ವರ್ಗಸ್ಥಾನವನ್ನು ಹೊಂದಿದಾಗ್ಯೂ, ಉಚ್ಚಸ್ಥಾನದಲ್ಲಿ ಶುಕ್ರನಿಂದ ಸೇರಿದ್ದರೂ ಲಗ್ನದೊಳು ಗುರು ಇದ್ದರು ಇಂಥಾ ಯೋಗದಲ್ಲಿ ಜನ್ಮಿಸಿದವನು ಸಾರ್ವಭೌಮನಾಗಿರುವನು ||೨||

ವರ್ಗೋತ್ತಮಗತೇರಾಹೌ ಸ್ವೋಚ್ಚೆ ಬುಧಸಮ
ನ್ವಿತೆ । ಗುರೌಚಂದ್ರಸ್ಥಿತೇಲಗ್ನೆ ಸಾರ್ವಭೌಮೊ
ಭವೆನ್ನರಃ ... ॥೭।

ಟೀ॥ ರಾಹು ವರ್ಗೋತ್ತಮವನ್ನು ಹೊಂದಿದಾಗ್ಯೂ ಉಚ್ಚಸ್ಥಾನದಲ್ಲಿ ಬುಧನಿಂದ ಶೇರಿದ್ದಾಗ್ಯೂ, ಗುರು ಚಂದ್ರನು ಲಗ್ನದಲ್ಲಿದ್ದಾಗ್ಯೂ, ಇಂಥ ವೇಳೆಯಲ್ಲಿ ಹುಟ್ಟಿದವನು ಸಾರ್ವಭೌಮವನ್ನು ಹೊಂದುತ್ತಾನೆ ॥೩॥

ವರ್ಗೋತ್ತಮಗತೆಸೂರ್ಯೆಸ್ವೋಚ್ಚೆ ಬುಧಸಮನ್ವಿ
ತೆ । ಉಚ್ಚೆ ಚಂದ್ರೆಯದಾಜಾತಃ ಸಾರ್ವಭೌಮೊ
ಭವೆನ್ನರಃ ... ॥೪॥

ಟೀ॥ಸೂರ್ಯನು ವರ್ಗೋತ್ತಮ ಸ್ಥಾನವನ್ನು ಹೊಂದಿದಾಗ್ಯೂ, ಉಚ್ಚಸ್ಥಾನದಲ್ಲಿ ಬುಧನಿದ್ದಾಗ್ಯೂ ಚಂದ್ರನು ಉಚ್ಚಸ್ಥಾನವಾದಂಥ ವೃಷಭರಾಶಿಯಲ್ಲಿದ್ದಾಗ್ಯೂ ಇಂಥಾ ಯೋಗದಲ್ಲಿ ಜನಿಸಿದ ಮನುಜನು ಸಾರ್ವಭೌಮವನ್ನು ಹೊಂದುವನು ... ॥೮॥

ವರ್ಗೋತ್ತಮಗತೆಚಂದ್ರೆಲಗ್ನೆವಾಕೇಂದ್ರಗೆತಥಾ।ಲ
ಗ್ನೆಶಸ್ವೋಚ್ಚಜಾಮಿತ್ರೆಸಾರ್ವಭೌಮೊಭವೆನ್ನರಃ॥

ಟೀ॥ ಚಂದ್ರನು ವರ್ಗೋತ್ತಮ ಸ್ಥಾನವನ್ನು ಹೊಂದಿದಾಗ್ಯೂ ಲಗ್ನದಲ್ಲಾದರೂ, ಕೇಂದ್ರದಲ್ಲಾದರೂ ಇದ್ದಾಗ್ಯೂ, ಲಗ್ನಾಧಿಪತಿ ಉಚ್ಚಸ್ಥಾನದಲ್ಲಾದರೂ, ಏಳನೆಯ ಸ್ಥಾನದಲ್ಲಾದರೂ ಇದ್ದಾಗ್ಯೂ, ಇಂಥಾ ಯೋಗದಲ್ಲಿ ಜನಿಸಿದ ಮನುಜನು ಸಾರ್ವಭೌಮವನ್ನು ಹೊಂದಿ ಸುಖವಾಗಿರುವನು ... ॥೫॥

ರಾಜಯೋಗಃ.

---*---

ಗುರೌಚಂದ್ರೆಸ್ಥಿತೆಸ್ವೋಚ್ಚೆ ಪಂಚಮೇಚಯದಾ
ಗುರುಃ । ಧೈರ್ಯಸ್ಥಾನಂಗತೆಭೌಮೆರಾಜಾಭವತಿ
ನಿಶ್ಚಯಃ ... ॥೧॥

ಟೀ॥ ಗುರುವು, ಚಂದ್ರನು ಉಚ್ಚಸ್ಥಾನದಲ್ಲಿದ್ದರೂ, ಐದನೇಸ್ಥಾನದಲ್ಲಿ ಶುಕ್ರನಿದ್ದರೂ, ಅಂಗಾರಕನು ಮೂರನೇ ಸ್ಥಾನವನ್ನು ಹೊಂದಿದ್ದರೂ ಇಂಥಾ ಯೋಗದಲ್ಲಿ ಹುಟ್ಟಿದಾತನು ರಾಜನಾಗುವನು ॥೧॥

ಕುಜೆಚಂದ್ರೆಸ್ಥಿತೆಸೋಚ್ಚೆ ಪಂಚಮೆಚಯದಾಗು
ರುಃ।ಭೃಗುಪುತ್ರೆಸ್ಥಿತೆಲಗ್ನೆರಾಜಾಭವತಿನಿಶ್ಚಯಃ॥

ಟೀ॥ ಅಂಗಾರಕನು, ಚಂದ್ರನು, ಉಚ್ಚಸ್ಥಾನಗತರಾದಾಗ್ಯೂ, ಐದನೆಯ ಸ್ಥಾನದಲ್ಲಿ ಗುರು ಇದ್ದಾಗ್ಯೂ ಶುಕ್ರನು ಲಗ್ನದಲ್ಲಿ ಇದ್ದಾಗ್ಯೂ, ಇಂಥಾ ಯೋಗದಲ್ಲಿ ಹುಟ್ಟಿದವನು ಅರಸು ಆಗುವನು ॥೨॥

ಶನೌಚಂದ್ರೆಸ್ಥಿತೆಸೋಚ್ಚೆ ಪಂಚಮೇಚ ಯದಾ
ಗುರುಃ। ಲಗ್ನೆಶೊಲಗ್ನಮಿಾಕ್ಷ್ಯಂತೆ ರಾಜಾಭವ
ತಿನಿಶ್ಚಯಃ ... ॥೩॥

ಟೀ॥ ಶನಿ, ಚಂದ್ರನು ಉಚ್ಚಸ್ಥಾನದಲ್ಲಿದ್ದಾಗ್ಯೂ, ಐದನೆಯ ಸ್ಥಾನದಲ್ಲಿ ಗುರುವಿದ್ದಾಗ್ಯೂ ಲಗ್ನಾಧಿಪತಿ ಲಗ್ನವನ್ನು ನೋಡುತ್ತ ಇದ್ದ ವೇಳೆಯಲ್ಲಿ, ಹುಟ್ಟಿದವನು ಅರಸು ಆಗುವನು, ನಿಶ್ಚಯವು ॥೩॥

ಶನೌಸೌಮ್ಯಸ್ಥಿತೆಸ್ವೋಚ್ಚೆ ಧರ್ಮಸ್ಥಾನಂಗತೆ

ಗುರೌ । ಕರ್ಮಸ್ಥಾನಂಗತೇಭೌಮ್ರರಾಜಾಭವತಿ
ನಿಶ್ಚಯಂ ... ॥೪॥

ಟೀ॥ ಶನಿ ಬುಧನು ಉಚ್ಚಸ್ಥಾನದಲ್ಲಿದ್ದಾಗ್ಯೂ, ಗುರು ಒಂಭತ್ತನೇ ಸ್ಥಾನದಲ್ಲಿದ್ದಾಗ್ಯೂ, ಅಂಗಾರಕನು ಹತ್ತನೇ ಸ್ಥಾನದಲ್ಲಿದ್ದಾಗ್ಯೂ. ಇಂಥಾ ಯೋಗದಲ್ಲಿ ಹುಟ್ಟಿದವನು ಅರಸು ಆಗುವನು, ಇದು ನಿಶ್ಚಯವು ॥೪॥

ಶನೌಶುಕ್ರೆಸ್ಥಿತೆಸ್ವೋಚ್ಚೇಕೇಂದ್ರೆಮಂತ್ರಿಸಮ
ನ್ವಿತೆ । ಸ್ವೋಚ್ಚೆಲಾಭಂಗತೆಚಂದ್ರೆರಾಜಾಭವತಿ
ನಿಶ್ಚಯಃ ॥೫॥

ಟೀ॥ ಶನಿ ಶುಕ್ರನು ಉಚ್ಚಸ್ಥಾನದಲ್ಲಿದ್ದಾಗ್ಯೂ, ಕೇಂದ್ರಸ್ಥಾನವು ಗುರುವಿನಿಂದ ಕೇರಿದ್ದಾಗ್ಯೂ, ಚಂದ್ರನು ಉಚ್ಚಸ್ಥಾನದಲ್ಲಿದ್ದಾಗ್ಯೂ, ಹನ್ನೊಂದನೆಯ ಸ್ಥಾನದಲ್ಲಿದ್ದಾಗ್ಯೂ ಇಂಥಾಯೋಗದಲ್ಲಿ ಜನಿಸಿದವನು ಅರಸು ಆಗುವನು ॥೫॥

ಸಿಂಹಾಸನಯೋಗಃ

ಚಾಪೆಮಂತ್ರೀಘಟೆಸೌರಿಃ ತುಲಾಯಾಂ ಭೃಗು
ನಂದನಃ । ಸಿಂಹರಾಶಿಗತೇರಾಹೌಯೋಗಸ್ಸಿ
ಹ್ಮಾಸನಾಭಿದಃ ॥೧॥

ಟೀ॥ ಧನುರ್ಲಗ್ನದಲ್ಲಿ ಗುರು ಯಿದ್ದಾಗ್ಯೂ, ಕುಂಭ ರಾಶಿಯಲ್ಲಿ ಶನೈಶ್ಚರನು ಇದ್ದಾಗ್ಯೂ, ತುಲಾರಾಶಿಯಲ್ಲಿ ಶುಕ್ರನು ಇದ್ದಾಗ್ಯೂ, ರಾಹು ಸಿಂಹರಾಶಿಯಂಹೊಂದಿದಾಗ್ಯೂ, ಇಂಥ ಯೋಗದಲ್ಲಿ ಜನ್ಮಿಸಿದವನು ಸಿಂಹಾಸನಾಧಿಪತಿಯಾಗುವನು ॥೧॥

ಮೇಷೇಸೂರ್ಯೇವೃಷೇಶುಕ್ರೇಕನ್ಯಾಯಾಂರಾಹೌತುಲಾಶ
ನಿಃ|ಕೀಟರಾಶಿಗತೇಭೌಮೇಯೋಗಸಿಂಹಾಸನಾಧಿಪಃ||

ಟೀ|| ಮೇಷರಾಶಿಯಲ್ಲಿ ಸೂರ್ಯನು ಇದ್ದಾಗ್ಯೂ, ವೃಷಭರಾಶಿಯಲ್ಲಿ ಶುಕ್ರನು ಇದ್ದಾಗ್ಯೂ, ಕನ್ಯಾರಾಶಿಯಲ್ಲಿ ರಾಹು ಇದ್ದಾಗ್ಯೂ ತುಲಾರಾಶಿಯಲ್ಲಿ ಶನೈಶ್ಚರನು ಇದ್ದಾಗ್ಯೂ, ವೃಶ್ಚಿಕರಾಶಿಯಲ್ಲಿ ಅಂಗಾರಕನು ಇದ್ದಾಗ್ಯೂ, ಇಂಥಾ ಯೋಗದಲ್ಲಿ ಹುಟ್ಟಿದವನು ಸಿಂಹಾಸನಾಧಿಪತಿಯಾಗುವನು ||೨||

ಕರ್ಕೇಮಂತ್ರೀವೃಷೇಚಂದ್ರಃಕನ್ಯಾಬುಧಸಮನ್ವಿ
ತಾ| ಮತ್ಸ್ಯಾಲಯಂಗತೇಕೇತೌಯೋಗಸಿಂಹಾ
ಸನಾಧಿಪಃ ||೩||

ಟೀ|| ಕರ್ಕಾಟಕರಾಶಿಯಲ್ಲಿ ಗುರುವಿದ್ದಾಗ್ಯೂ ವೃಷಭರಾಶಿಯಲ್ಲಿ ಶಶಾಂಕನಿದ್ದರೂ, ಕನ್ಯಾರಾಶಿ ಬುಧನಿಂದ ಕೇರಿದ್ದಾಗ್ಯೂ, ಮೀನರಾಶಿಯಂ ಕೇತು ಹೊಂದಿದಾಗ್ಯೂ, ಇಂಥಾ ಯೋಗದಲ್ಲಿ ಜನಿಸಿದವನು ಸಿಂಹಾಸನಾಧಿಪತಿ ಆಗುವನು ||೩||

ಭೂಮಿಪುತ್ರೇಸ್ಥಿತೇಮೇಷೇಮಾರ್ತಾಂಡಃಶ್ರಿತಕೇಸರೀ|
ಶರಾಸನಸ್ಥಿತೇಕೇತೌಯೋಗಸಿಂಹಾಸನಾಧಿಪಃ||೪||

ಟೀ|| ಅಂಗಾರಕನು ಮೇಷರಾಶಿಯಲ್ಲಿದ್ದರೂ, ಸೂರ್ಯನು ಸಿಂಹರಾಶಿಯಲ್ಲಿದ್ದಾಗ್ಯೂ, ಕೇತು ಧನುರಾಶಿಯಲ್ಲಿದ್ದಾಗ್ಯೂ ಇಂಥಾ ಯೋಗದಲ್ಲಿ ಹುಟ್ಟಿದವನು ಸಿಂಹಾಸನಾಧಿಪತಿಯಾಗುವನು ||೫||

ಕನ್ಯಾಯುಗ್ಮೇಘಟೇರಾಹೌ ಭೂಮಿಪುತ್ರೇಶ್ಚ ...

ಕ್ರುಭೆ ! ಕೋದಂಡೇಚಗತಸ್ಸೌರಿಯೋಗಸ್ಸೇಹಾಸ್ತ್ರ
ಸೇನಾಧಿಪಃ ‖೫‖

ಟೀ‖ ಕನ್ಯಾರಾಶಿಯಲ್ಲಾದರೂ, ಕುಂಭರಾಶಿಯಲ್ಲಾದರೂ, ಕುಂಭರಾಶಿಯಲ್ಲಿ ರಾಹು ಇದ್ದಾಗ್ಯೂ, ಅಂಗಾರಕನು ಮಕರರಾಶಿಯಲ್ಲಿದ್ದಾಗ್ಯೂ, ಧನುರಾಶಿಯಲ್ಲಿ ಶನೈಶ್ಚರನು ಇದ್ದಾಗ್ಯೂ, ಇಂಥಾಯೋಗದಲ್ಲಿ ಜನಿಸಿದವನು ಸೇಹಾಸ್ತ್ರಸೇನಾಧಿಪತಿ ಆಗುವನು ‖೫‖

ಜಾರಯೋಗಃ

ಭೌಮಾಂಶೇಚಂದ್ರಸಂಯುಕ್ತೇಶನಿರಾಹುಸಮನ್ವಿ
ತೇ। ಶೂದ್ರಸ್ತ್ರೀಪ್ಯಥವಾವೃದ್ಧಾ ನೀಚಸ್ತ್ರೀಭೋ
ಗಮಿಚ್ಛತಿ॥ ‖೧‖

